# ನೇಸರು

## ತಿಂಗಳೋಲೆ

₹ 5/-

Nesaru **Tingalole** Vol XXXV - 1 January 2017

PAGES 16



## ಅಸೋಸಿಯೇಶನ್‌ನಲ್ಲಿ ಶ್ರೀರಂಗ ರಂಗೋತ್ಸವ

ಮೈಸೂರು ಅಸೋಸಿಯೇಷನ್ ಮುಂಬೈ

**The Mysore Association, Bombay**

393, Bhau Daji Road, Matunga, Mumbai - 400 019.

Tel. : 2402 4647, 2403 7065, 2401 0574

Email : mysoreassociation.mumbai@gmail.com

# ಆಧುನಿಕ ಸಮಸ್ಯೆ ಚಿಂತನೆಯನ್ನೊಳಗೊಂಡ ಕಥೆಗಳು ಹೆಚ್ಚೆಚ್ಚು ಮೂಡಿ ಬರಲಿ - ಶ್ರೀನಿವಾಸ ಜೋಕಟ್ಟೆ

ಮೈಸೂರು ಅಸೋಸಿಯೇಷನ್, ಮುಂಬಯಿ ಮತ್ತು ಮಾಸ್ತಿ ಜೀವನ ಕಾರ್ಯಾಲಯ ಟ್ರಸ್ಟ್ ಜಂಟಿಯಾಗಿ ಕನ್ನಡದ ಆಸ್ತಿ–ಮಾಸ್ತಿಯವರ 125ನೇ ಹುಟ್ಟುಹಬ್ಬದ ಆಚರಣೆ ರವಿವಾರ ಡಿಸೆಂಬರ್ 11, 2016 ಸಂಜೆ 6.30ಕ್ಕೆ ಮೈಸೂರು ಅಸೋಸಿಯೇಷನ್‌ನ ಸಭಾಗೃಹದಲ್ಲಿ ಅದ್ದೂರಿಯಾಗಿ ಜರುಗಿತು.

ಮುಖ್ಯ ಅತಿಥಿಯಾಗಿ ಕರ್ನಾಟಕಮಲ್ಲದ ಉಪಸಂಪಾದಕ, ಲೇಖಕ, ಕವಿ ಶ್ರೀ ಶ್ರೀನಿವಾಸ ಜೋಕಟ್ಟೆಯವರು ಭಾಗವಹಿಸಿದ್ದರು. ಕಾರ್ಯಕ್ರಮವು ವಿದುಷಿ ಶ್ರೀಮತಿ ಶ್ಯಾಮಲಾ ರಾಧೇಶ್ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡಿತು. ಪ್ರಾಸ್ತಾವಿಕವಾಗಿ ಮಾತನಾಡಿದ ಮೈಸೂರು



ಮೊದಲ ಬಹುಮಾನ ವಿನಾಯಕ ಅರಳಸುರಳಿ, ಶಿವಮೊಗ್ಗ

ಅಸೋಸಿಯೇಷನ್‌ನ ಟ್ರಸ್ಟಿಗಳಲ್ಲಿ ಒಬ್ಬರಾದ ಶ್ರೀ ಮಂಜುನಾಥಯ್ಯನವರು ಮೈಸೂರು ಅಸೋಸಿಯೇಷನ್‌ಗೆ 90ವರ್ಷ ತುಂಬಿದ ಈ ಸುಸಂದರ್ಭದಲ್ಲಿ ಕೆಲವೊಂದು ಮಹತ್ವದ ಯೋಜನೆಗಳನ್ನು ಹಾಕಿಕೊಂಡಿದೆ. ಈಗಾಗಲೇ ಜಾಗತಿಕ ಮಟ್ಟದಲ್ಲಿ ಕವನ ಸ್ಪರ್ಧೆಯನ್ನು ಮತ್ತು ಕಥಾ ಸ್ಪರ್ಧೆಯನ್ನು ಯಶಸ್ವಿಯಾಗಿ ಈಡೇರಿದೆ. ನಮ್ಮ ಅಸೋಸಿಯೇಷನ್‌ನ ಮಾಜಿ ಅಧ್ಯಕ್ಷರಾದ ದಿ. ವಿ. ರಾಮಭದ್ರಪ್ಪನವರು ಈ ಮಾಸ್ತಿಯವರ ಹೆಸರಿನಲ್ಲಿ ಅಸೋಸಿಯೇಷನ್ ನಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಬಯಸಿದ್ದರು. ಹಾಗಾಗಿ ನಮ್ಮ ಈ ಕಥಾ ಸ್ಪರ್ಧೆಯನ್ನು ಮಾಸ್ತಿ ಸ್ಮರಣಾರ್ಥ ಸಣ್ಣ ಕಥಾ ಸ್ಪರ್ಧೆಯಂತ ಹೆಸರಿಟ್ಟೆವು ಎಂದು ನುಡಿದರು. ಕಥಾಸ್ಪರ್ಧೆಗೆ ತೀರ್ಪುಗಾರರಾಗಿ ಸಹಕರಿಸಿದ ಶ್ರೀನಿವಾಸ ಜೋಕಟ್ಟೆ ಮತ್ತು ಕನ್ನಡದ ಖ್ಯಾತ ಬರಹಗಾರ್ತಿ ವೈದೇಹಿ ಅವರಿಗೆ ಮನದಾಳದ ಕೃತಜ್ಞತೆಯನ್ನು ಅರ್ಪಿಸಿದರು.

ನೇಸರು ಜಾಗತಿಕ ಮಾಸ್ತಿ ಸ್ಮರಣಾರ್ಥ ಸಣ್ಣ ಕಥಾಸ್ಪರ್ಧೆಯಲ್ಲಿ ವಿಜೇತರ




ವಿವರವನ್ನು ಅಸೋಸಿಯೇಷನ್‌ನ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ನಾರಾಯಣ ನವಿಲೇಖರ್ ಅವರು ತಿಳಿಸಿದರು. ಕಥಾಸ್ಪರ್ಧೆಯಲ್ಲಿ ಮೊದಲ ಬಹುಮಾನವನ್ನು ವಿನಾಯಕ ಅರಳಸುರಳಿ, ಶಿವಮೊಗ್ಗ ಇವರು ಬರೆದ 'ಗೋಪಿಯ ಅಜ್ಜಿ' ಕಥೆ ಪಡೆದುಕೊಂಡರೆ, ದ್ವಿತೀಯ ಬಹುಮಾನವನ್ನು ಹುಲಗೋಳ ನಾಗಪತಿ ಹೆಗಡೆ, ಅಂಕೋಲ ಅವರು ಬರೆದ 'ಹಗಲು ರಾತ್ರಿ ದನಕಾಯುವವರು' ಕಥೆ ಪಡೆದುಕೊಂಡರೆ, ತೃತೀಯ ಬಹುಮಾನವನ್ನು ಕುಮಾರ್ ವಿಜಯ್, ಬೆಂಗಳೂರು ಇವರು ಬರೆದ 'ಸಾಂಗತ್ಯ' ಕಥೆ ಪಡೆದುಕೊಂಡರೆ, ಪ್ರೋತ್ಸಾಹಕ ಬಹುಮಾನವನ್ನು ಎ. ಎಸ್. ಗೀತಾ ಕುಬೇರಪ್ಪ ಅವರು ಬರೆದ 'ಬಿಟ್ಟೆನಂದರೂ..' ಎಂಬ ಕಥೆ ಮತ್ತು ಡಾ. ಬಿ. ಜನಾರ್ಧನ್ ಭಟ್, ಉಡುಪಿ ಇವರು ಬರೆದ 'ಭೂತ' ಕಥೆ ಪಡೆದುಕೊಂಡಿದೆ.

ಪ್ರಥಮ ಬಹುಮಾನವನ್ನು ಪಡೆದ ವಿನಾಯಕ ಅರಳಸುರಳಿಯವರು ತಮ್ಮ ಒಂದು ಅನಿಸಿಕೆಯನ್ನು ಹಂಚಿಕೊಳ್ಳುತ್ತಾ, ಮೊದಲ ಬಾರಿಗೆ ವೇದಿಕೆಯಲ್ಲಿ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮತ್ತು ನಮ್ಮಂತಹ ಹವ್ಯಾಸಿ ಬರಹಗಾರರನ್ನು ಪ್ರೋತ್ಸಾಹಿಸಿದ್ದಕ್ಕೆ ಮೈಸೂರು ಅಸೋಸಿಯೇಷನ್ ಮನಪೂರ್ವಕ ಧನ್ಯವಾದವನ್ನು



ದ್ವಿತೀಯ ಬಹುಮಾನ ಹುಲಗೋಳ ನಾಗಪತಿ ಹೆಗಡೆ,

ಅರ್ಪಿಸಿದರು. ನಂತರ ಮಾತನಾಡಿದ ಇನ್ನೊಬ್ಬ ಕಥಾ ವಿಜೇತರಾದ ಹುಳಗೋಳ ನಾಗಪತಿ ಹೆಗಡೆಯವರು ಪರವೂರಿನಲ್ಲಿ ನಮ್ಮ ಭಾಷೆ, ಸಂಸ್ಕೃತಿಯನ್ನು ಉಳಿಸುವ ಕಾರ್ಯ ಅಷ್ಟೊಂದು ಸುಲಭದ ಮಾತಲ್ಲ. ಒಳನಾಡಿನಲ್ಲಿ ಕನ್ನಡಿಗರ ಮಧ್ಯೆನೆ ನಾವು ಹಲವಾರು ಸಮಸ್ಯೆಗಳನ್ನು ಎದುರಿಸುತ್ತೇವೆ. ಅಂತಹದರಲ್ಲಿ ಕನ್ನಡದ ಉಳಿವಿಗಾಗಿ ಮೈಸೂರು ಅಸೋಸಿಯೇಷನ್ ಬಹಳ ಒಳ್ಳೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿರುವುದನ್ನು ಕೇಳಿ ಸಂತೋಷಪಟ್ಟೆ ಎಂದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ ಪತ್ರಕರ್ತ ಶ್ರೀನಿವಾಸ ಜೋಕಟ್ಟೆಯವರು ವಿಜೇತರಿಗೆ ಹೂಗುಚ್ಛ, ಸರ್ಟಿಫಿಕೇಟ್ ಮತ್ತು ಚೆಕ್‌ನ್ನು ಪ್ರಧಾನಿಸಿದರು.

ಮಾಸ್ತಿ ಸ್ಮರಣಾರ್ಥ ಜಾಗತಿಕ ನೇಸರು ಕಥಾಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆಯ ಸಲುವಾಗಿ ಹಮ್ಮಿಕೊಂಡ ಈ ಕಾರ್ಯಕ್ರಮದಲ್ಲಿ ನೇಸರು ವಿಶೇಷ ಕಥಾಸಂಚಿಕೆಯನ್ನು ಹೊರತರಲಾಗಿತ್ತು. ಅದನ್ನು ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಪತ್ರಕರ್ತ ಶ್ರೀ ಶ್ರೀನಿವಾಸ ಜೋಕಟ್ಟೆಯವರು ಬಿಡುಗಡೆಗೊಳಿಸಿದರು. ಅಸೋಸಿಯೇಷನ್‌ನ ಅಧ್ಯಕ್ಷರಾದ ಕೆ. ಕಮಲಾ ಅವರು ಮುಖ್ಯ ಅತಿಥಿಗೆ ಪುಷ್ಪ ಗೌರವವನ್ನು ನೀಡಿ ಗೌರವಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಶ್ರೀನಿವಾಸ ಜೋಕಟ್ಟೆಯವರು

(ಪುಟ 5ಕ್ಕೆ)

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎಸ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574

Email :
mysoreassociation.mumbai@gmail.com

Website :
www.mysoreassociation.in

*ಸಂಪಾದಕೀಯ*

# ನೇಸರು

## ತಿಂಗಳೋಲೆ

**ಸಂಪುಟ 35** | **ಜನವರಿ 2017** | **ಸಂಚಿಕೆ 1**

# ಕನ್ನಡದ ಹೆಸರಾಂತ ನಾಟಕಕಾರ – ಶ್ರೀರಂಗ

ಆದ್ಯರಂಗಾಚಾರ್ಯ ಕನ್ನಡದ ನಾಟಕ ಕ್ಷೇತ್ರದಲ್ಲಿ ಅಪಾರ ಸಾಧನೆಯನ್ನು ಮಾಡಿದವರು. ಆದ್ಯರಂಗಾಚಾರ್ಯರು ಕನ್ನಡ ಸಾಹಿತ್ಯ ಲೋಕದಲ್ಲಿ ಶ್ರೀರಂಗ ಎಂಬ ಹೆಸರಿನಿಂದ ಪ್ರಸಿದ್ಧರು. ಕನ್ನಡದ ಖ್ಯಾತ ವಿದ್ವಾಂಸ, ನಾಟಕಕಾರ ಮತ್ತು ಸಾಹಿತಿ. ಆದ್ಯರಂಗಾಚಾರ್ಯರ ಮೂಲ ಹೆಸರು ಆರ್. ವಿ. ಜಾಗೀರದಾರ. ಇವರು ಸೆಪ್ಟೆಂಬರ್ 26, 1904ರಂದು ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಅಗರಖೇಡದಲ್ಲಿ ಜನಿಸಿದರು. ಲಂಡನ್ನಿನಲ್ಲಿ ಎಂ. ಎ. ಪದವಿಯನ್ನು ಪೂರೈಸಿದ ಶ್ರೀರಂಗರು ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು.

ಕನ್ನಡ ನಾಟಕ ಕ್ಷೇತ್ರದಲ್ಲಿ ಕೈಲಾಸಂ ಮತ್ತು ಶ್ರೀರಂಗರನ್ನು ಅಶ್ವಿನಿ ದೇವತೆಗಳೆಂದು ಕರೆಯಬಹುದು. ಕನ್ನಡದಲ್ಲಿ ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ನಾಟಕಗಳು ಅಪಾರ ಸಂಖ್ಯೆಯಲ್ಲಿ ಬಂದಿವೆ. ಮುಖ್ಯವಾಗಿ ಸಾಮಾಜಿಕ ನಾಟಕವನ್ನು ಬೆಳೆಸಿದವರು, ಕನ್ನಡದಲ್ಲಿ ಸಮೃದ್ಧವಾಗಿ ನಾಟಕಗಳನ್ನು ಬರೆದು ನಾಟಕಕ್ಕೊಂದು ರೂಪ ಕೊಟ್ಟವರು ಇಬ್ಬರು, ಕೈಲಾಸಂ ಮತ್ತು ಶ್ರೀರಂಗರು.

ಸಾಮಾಜಿಕ ನಾಟಕದಲ್ಲಿ ಸಮಾಜದ ಸ್ವರೂಪ ಮತ್ತು ವ್ಯವಸ್ಥೆಯ ಕಲ್ಪನೆಯ ಜೊತೆಗೆ ಸಾಹಿತಿ ಚಿತ್ರಿಸಿದ ಸಮಾಜದ ವಿಶಿಷ್ಟ ಲಕ್ಷಣ, ಅದರ ದೌರ್ಬಲ್ಯ ಹಾಗೂ ಅದರ ಅಗತ್ಯತೆಯ ಮೇಲೆ ಬೆಳಕು ಚೆಲ್ಲಬೇಕು. ಶ್ರೀರಂಗರು ನಾಟಕಗಳನ್ನು ಜನಸಾಮಾನ್ಯರ ಹತ್ತಿರಕ್ಕೆ ತಂದರು. ಬಹುಮಟ್ಟಿಗೆ ರಂಗಭೂಮಿಯಲ್ಲಿ ಕಾಣುತ್ತಿದ್ದ ರಾಜರು, ಸನ್ಯಾಸಿಗಳ ಪಾತ್ರಗಳ ಬದಲಾಗಿ ಜನಸಾಮಾನ್ಯರನ್ನು ತಂದರು. ಶ್ರೀರಂಗರು ಚಿಕ್ಕಂದಿನಿಂದಲೂ ಮರಾಠಿ ನಾಟಕಗಳನ್ನು ನೋಡಿ ಬೆಳೆದವರು. ಸಂಸ್ಕೃತ ಪಂಡಿತರಾಗಿದ್ದ ಅವರು ಸಂಸ್ಕೃತದ ನಾಟಕದ ಒಳ ಹೊರಗನ್ನು ತಿಳಿದವರು. ಕೈಲಾಸಂರಂತೆ ಶ್ರೀರಂಗರೂ ಕೂಡ ನಾಟಕವನ್ನು ಜೀವನ ವಿಮರ್ಶೆಗಾಗಿ ಬಳಸಿಕೊಂಡರು. ಅವರ ನಾಟಕಗಳು ಮನಸ್ಸನ್ನು ಚಿಂತನೆಗೆ ಹಚ್ಚುತ್ತದೆ. ಜೀವನದ ವಿಡಂಬನೆಯು ಕೈಲಾಸಂ ಅವರ ವಿಡಂಬನೆಗಿಂತ ಹೆಚ್ಚು ತೀಕ್ಷ್ಣವಾದುದು ಎಂದು ಹೇಳಿದರೆ ತಪ್ಪಾಗಲಾರದು.

ಶ್ರೀರಂಗರ ನಾಟಕ ರಚನೆ ಬಹು ಸಮೃದ್ಧವಾದುದು. 34 ದೊಡ್ಡ ನಾಟಕಗಳನ್ನು, 50 ಏಕಾಂಕಗಳನ್ನು, 10 ಕಾದಂಬರಿಗಳನ್ನು, 120 ಹಾಸ್ಯ ಪ್ರಬಂಧಗಳನ್ನು ರಚಿಸಿದ್ದಾರೆ. ಧಾರವಾಡದ ಪ್ರಸಿದ್ಧ ನಿಯತಕಾಲಿಕ 'ಜಯಂತಿ'ಗೆ ಸತತ 3 ವರ್ಷಗಳವರೆಗೆ ಅಂಕಣ ಬರೆದಿದ್ದಾರೆ. ಅವರ ಪ್ರಮುಖ ನಾಟಕಗಳು ಸ್ವಾರ್ಥತ್ಯಾಗ, ಧರ್ಮವಿಜಯ, ಉದರವೈರಾಗ್ಯ, ಹರಿಜನ್ವಾರ, ಶೋಕಚಕ್ರ, ಕತ್ತಲೆ ಬೆಳಕು, ನೀ ಮಾಯೆಯ್ಯೊಳಗೋ? ನಿನ್ನೊಳು ಮಾಯೆಯೋ?, ಗುಮ್ಮನೆಲ್ಲಿಹ ತೋರಮ್ಮ ಇತ್ಯಾದಿ.

1954ರಲ್ಲಿ ರಾಯಚೂರಿನಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಶ್ರೀರಂಗರು ಅಧ್ಯಕ್ಷರಾಗಿದ್ದರು. ಇವರ ಸಾಧನೆಗೆ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳು ಇವರ ಮಡಿಲಿಗೆ ಸಂದಿವೆ. ಮುಖ್ಯವಾಗಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರ, ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ, ಕೇಂದ್ರ ಹಾಗೂ ರಾಜ್ಯ ಸಂಗೀತ ಅಕಾಡೆಮಿಯ ಪುರಸ್ಕಾರ ಇತ್ಯಾದಿ. ಮೈಸೂರು ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಿ. ಲಿಟ್ ನೀಡಿದೆ.

ಮೈಸೂರು ಅಸೋಸಿಯೇಷನ್ ಮುಂಬಯಿ ಹೊರನಾಡಿನಲ್ಲಿದ್ದುಕೊಂಡು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಯ ಉಳಿವಿಗಾಗಿ ಶ್ರಮಿಸುತ್ತಿರುವ ಸಂಸ್ಥೆಯಾಗಿದೆ. ಕನ್ನಡಿಗರಿಗಾಗಿ ಬಹಳ ಮಹತ್ವದ ಯೋಜನೆಗಳನ್ನು ಹಮ್ಮಿಕೊಂಡಿದೆ. ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ತನ್ನನ್ನು ಅವಿರತವಾಗಿ ತೊಡಗಿಸಿಕೊಂಡಿರುವ ಮೈಸೂರು ಅಸೋಸಿಯೇಷನ್ ಕನ್ನಡ ರಂಗಭೂಮಿಗೆ ತನ್ನದೇ ಆದ ಕೊಡುಗೆಯನ್ನು ಸಲ್ಲಿಸುತ್ತಾ ಬಂದಿದೆ. ಕನ್ನಡ ನಾಟಕಗಳಲ್ಲದೆ ತಾನು ನೆಲೆನಿಂತ ಇಲ್ಲಿನ ಮರಾಠಿ ನಾಟಕಕ್ಕೂ ಪ್ರೋತ್ಸಾಹವನ್ನು ನೀಡುತ್ತಾ ಬಂದಿದೆ. ಇದೇ ಬರುವ ಜನವರಿ 21ರಂದು ಕನ್ನಡದ ಮಹತ್ವದ ನಾಟಕಕಾರರಲ್ಲಿ ಒಬ್ಬರಾದ ಶ್ರೀರಂಗರ ಸವಿನೆನಪಿಗಾಗಿ "ಶ್ರೀರಂಗ ರಂಗೋತ್ಸವ" ಮೂರು ದಿನಗಳ ಬಹುಭಾಷಾ ನಾಟಕೋತ್ಸವವನ್ನು ಹಮ್ಮಿಕೊಂಡಿದೆ. ಈ ಕಾರ್ಯಕ್ರಮಕ್ಕೆ ಯಶಸ್ಸನ್ನು ಕೋರುತ್ತಾ, ಮೈಸೂರು ಅಸೋಸಿಯೇಷನ್‌ಗೆ ಎಲ್ಲ ರೀತಿಯ ಶುಭಗಳಿರಲಿ ಎಂದು ಹಾರೈಸುತ್ತೇವೆ.

**– ಡಾ. ಜ್ಯೋತಿ ಸತೀಶ್**

# ಅಗ್ರಪಂಕ್ತಿಯ ಮುಂಬಯಿ ಕಥೆಗಾರ್ತಿ - ಶ್ರೀಮತಿ ಲಲಿತಾ ರಾಮಣ್ಣ

ಕನ್ನಡ ಭಾಷೆಯ ಅಳಿವು-ಉಳಿವಿನ ಕುರಿತಾದ ವ್ಯಾಪಕ ಜಾಗೃತಿ ನಿರ್ಮಾಣಗೊಂಡಿರುವ ಪ್ರಸ್ತುತ ಸಂದರ್ಭದಲ್ಲಿ ಕನ್ನಡ ಭಾಷೆ ಹಾಗೂ ಕನ್ನಡ ಸಾಹಿತ್ಯವು ಮುಂಬಯಿಯಂತಹ ಬಹುಭಾಷಿಕ ನಗರದಲ್ಲಿ ಆಳವಾಗಿ ನೆಲವೂರಿ ಆಲದ ಮರದಂತೆ ಸಮೃದ್ಧವಾಗಿ ಬೆಳೆದಿರುವುದು ತೃಪ್ತಿನೀಡುವ ವಿಷಯ. ಇಂತಹ ಅಸಾಮಾನ್ಯ ಕಾರ್ಯ ಸಾಧನೆಗಾಗಿ ಪರಿಶ್ರಮಿಸಿದವರು ಮುಂಬಯಿಯಲ್ಲಿ ಬದುಕು ಕಟ್ಟಿಕೊಳ್ಳಲು ವಲಸೆ ಬಂದಂತಹ ಸಾಮಾನ್ಯ ಕನ್ನಡಿಗರು. ಅವರು ಕನ್ನಡಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪೂರ್ವವಾದುದು; ಅನನ್ಯವಾದುದು. ಮುಂಬಯಿಯಲ್ಲಿ ಕನ್ನಡಸಾಹಿತ್ಯವು ಬೆಳೆದುಬಂದ ದಾರಿಯಲ್ಲಿ ಅದಕ್ಕಾಗಿ ಪರಿಶ್ರಮಿಸಿದವರ ಸದ್ಯ ಮಸುಕಾಗಿ ಉಳಿದುಕೊಂಡಿರುವ ಹೆಜ್ಜೆಗುರುತುಗಳನ್ನು ಗಮನಿಸುವುದೇ ಅತ್ಯಂತ ರೋಚಕ ಸಂಗತಿ. ಅದರಲ್ಲೂ ನಲ್ವತ್ತರ ದಶಕದಲ್ಲಿ ಮುಂಬಯಿಯಲ್ಲಿ ನೆಲೆಸಿದ್ದ ಬಹುಮುಖ ಪ್ರತಿಭಾವಂತ ಗೃಹಿಣಿಯೋರ್ವಳು ಈ ನಿಟ್ಟಿನಲ್ಲಿ ನಡೆಸಿದ ಸಾಧನೆ ನಿಜಕ್ಕೂ ಅಮೋಘವಾದುದು. ಅವರೇ ಶ್ರೀಮತಿ ಲಲಿತಾ ರಾಮಣ್ಣ. ಈ ಹೆಸರು ತಿಳಿದವರು ಸದ್ಯ ಬೆರಳೆಣಿಕೆಯಷ್ಟು ಮಾತ್ರ ಎಂದರೆ ಆಶ್ಚರ್ಯವೇನಿಲ್ಲ. ಅವರನ್ನು ಅಕ್ಕರೆಯಿಂದ ಸ್ಮರಿಸುವ ಹಾಗೂ ಅವರ ಸಾಹಿತ್ಯವನ್ನು ಪರಿಚಯಿಸುವ ಸಣ್ಣ ಪ್ರಯತ್ನ ಇಲ್ಲಿದೆ.

ಲಲಿತಾ ಅವರು 20-04-1920ರಲ್ಲಿ ಅರಸೀಕೆರೆ ತಾಲೂಕಿನ ಹಿರಿಯೂರು ಎಂಬ ಹಳ್ಳಿಯಲ್ಲಿ ಜನಿಸಿದರು. ತಂದೆಯವರು ನೌಕರಿ ನಿಮಿತ್ತ ಹಿರಿಯೂರಿನಲ್ಲಿಯೇ ನೆಲೆಸಿದ್ದ ಕಾರಣ ಅವರ ಶಿಕ್ಷಣವೂ ಅಲ್ಲೇ ನಡೆಯಿತು. ಒಬ್ಬ ಸಹೋದರ ಹಾಗೂ ಇಬ್ಬರು ಸಹೋದರಿಯರೊಂದಿಗೆ ಬಾಲ್ಯ ಕಳೆದ ಲಲಿತಾ ಅವರ ವಿವಾಹವು ಮುಂಬಯಿಯಲ್ಲಿ ಅಂಚೆಕಚೇರಿಯಲ್ಲಿ ನೌಕರರಾಗಿದ್ದ ರಾಮಣ್ಣನವರೊಂದಿಗೆ ಎಪ್ರಿಲ್ 1932ರಲ್ಲಿ ನೆರವೇರಿತು. ಕನ್ನಡ ಮಾತ್ರ ತಿಳಿದಿದ್ದ ಲಲಿತಾ ಮುಂಬಯಿಗೆ ಬಂದು ಇತರ ಹೆಣ್ಮಕ್ಕಳಂತೆ ಸ್ಥೈರ್ಯ ಕಳೆದುಕೊಳ್ಳಲಿಲ್ಲ. ಭಾಷೆಯ ಕುರಿತಾದ ಅಗಾಧ ಆಸಕ್ತಿಯಿಂದಾಗಿ ಬಹುಬೇಗನೆ ಮುಂಬಯಿಯ ವ್ಯಾವಹಾರಿಕ ಭಾಷೆಯಾದ ಹಿಂದಿ ಮತ್ತು ಮರಾಠಿ ಕಲಿತುಕೊಂಡದ್ದಲ್ಲದೆ, ನೆರೆಹೊರೆಯವರಿಂದ ತಮಿಳು ಮತ್ತು ಗುಜರಾತಿ ಭಾಷೆಗಳನ್ನೂ ಕಲಿತರು. ಲಲಿತಾ ಅವರಿಗೆ ಬಾಲ್ಯದಿಂದಲೂ ಸಾಹಿತ್ಯದಲ್ಲಿ, ಸಂಗೀತದಲ್ಲಿ ಅಪರಿಮಿತ ಆಸಕ್ತಿ. ಮದುವೆಯ ನಂತರ ಗಂಡನ ಪ್ರೋತ್ಸಾಹದಿಂದ ಮುಂಬಯಿಯಲ್ಲಿಯೇ ಸಂಗೀತದಲ್ಲಿ ಪ್ರಾವಿಣ್ಯತೆಯನ್ನು ಪಡೆದರು ಹಾಗೂ ಬರವಣಿಗೆಯನ್ನೂ ರೂಢಿಸಿಕೊಂಡರು. ಶಾಸ್ತ್ರೀಯ ಗಾಯನದಂತೆಯೇ ದಿಲ್‌ರುಬಾವನ್ನೂ ಬಹಳ ಅದ್ಭುತವಾಗಿ ನುಡಿಸುತ್ತಿದ್ದರು. ತಮ್ಮ ಸಂಗೀತ ಪ್ರಾವಿಣ್ಯತೆಯಿಂದಾಗಿ ಹಲವಾರು ಸಂಗೀತ ಸ್ಪರ್ಧೆಗಳಿಗೆ ಜಡ್ಜ್ ಆಗಿ ಆಹ್ವಾನಿಸಲ್ಪಡುತ್ತಿದ್ದರು. ಆಕಾಶವಾಣಿಯಲ್ಲಿ ನಿಯಮಿತವಾಗಿ ಸಂಗೀತ ಕಾರ್ಯಕ್ರಮಗಳನ್ನು ಪ್ರಸ್ತುತ ಪಡಿಸುತ್ತಿದ್ದರು. ಮಾತ್ರವಲ್ಲದೆ ಹಲವಾರು ರೇಡಿಯೋ ನಾಟಕಗಳನ್ನೂ ಬರೆದಿದ್ದರು. ಅವರ ಮಗ ಡಾ. ಮಾಧವರಾವ್ ನೆನಪಿಸಿಕೊಳ್ಳುವಂತೆ ಹಲವು ಸಾರಿ ತಮ್ಮ ಮಗನನ್ನೂ ಆಕಾಶವಾಣಿ ನಾಟಕದಲ್ಲಿ ಭಾಗವಹಿಸಲು ಕರೆದೊಯ್ಯುತ್ತಿದ್ದರು. ಲಲಿತಾಂಬ ಅವರ ಮಗಳು- ಬಿ.ಎ.ಮಾಡಿ ಮಹಾರಾಷ್ಟ್ರ ಸರಕಾರದ Maharashtra Govt Social Welfare dept. ನಲ್ಲಿ ಸೇವೆ ಸಲ್ಲಿಸಿ, the District Social Welfare officer ಪದವಿಯಲ್ಲಿ ನಿವೃತ್ತಿಹೊಂದಿ, ನಿಧನಗೊಂಡರು. ಅವರಿಗಿಂತ ಹನ್ನೆರಡು ವರ್ಷಗಳ ನಂತರ ಜನಿಸಿದ ಮಗ ಡಾ. ಮಾಧವ anaesthesiologist ಆಗಿ ಮುಂಬಯಿಯಲ್ಲಿ ದುಡಿಯುತ್ತಿದ್ದಾರೆ. ಇವರಿಗೆ ಇಬ್ಬರು ಮಕ್ಕಳಿದ್ದು ಇಬ್ಬರೂ ಉನ್ನತ ಶಿಕ್ಷಣ ಪಡೆದು ಮದುವೆಯಾಗಿ ಅಮೇರಿಕಾದಲ್ಲಿ ನೆಲೆಸಿದ್ದಾರೆ. ಉತ್ತಮ ಕತೆಗಾರ್ತಿಯಾಗಿ ಬೆಳೆಯುವ ಉಜ್ವಲ ಭವಿಷ್ಯ ಹೊಂದಿದ್ದ ಶ್ರೀಮತಿ ಲಲಿತಾ ರಾಮಣ್ಣ ಅವರು ಜೀವನದ ಉತ್ತರಾರ್ಧದಲ್ಲಿ ಅನಾರೋಗ್ಯದಿಂದಾಗಿ ಮಾನಸಿಕವಾಗಿ ಬಹಳ ನೊಂದುಕೊಂಡಿದ್ದರು; ಹಾಗೂ ಕೊನೆಕೊನೆಗೆ ಬರೆಯುವುದನ್ನೇ ಬಿಟ್ಟುಬಿಟ್ಟರು ಎನ್ನುವುದು ವಿಷಾದನೀಯ ಸಂಗತಿ.

'ಬಾಗಿನ' ಇವರ ಚೊಚ್ಚಲ ಕಥಾಸಂಕಲನ. 1955ರಲ್ಲಿ ಇದನ್ನು ಧಾರವಾಡದ ಮನೋಹರ ಗ್ರಂಥ ಪ್ರಕಾಶನ ಸಮಿತಿಯವರು ಪ್ರಕಟಿಸಿದರು. ಈ ಸಂಕಲನದಲ್ಲಿ ಹದಿನಾರು ಕಥೆಗಳಿವೆ. ಶ್ರೀ ಎನ್ಕೆ ಕುಲಕರ್ಣಿಯವರ ಮುನ್ನುಡಿಯು ಕಥೆಗಾರ್ತಿಯ ಕಥನಶೈಲಿಯನ್ನು ಹಾಗೂ ಪ್ರತಿಭೆಯನ್ನು ಮುಕ್ತವಾಗಿ ಪ್ರಶಂಸಿಸಿದೆ. ಲಲಿತಾ ರಾಮಣ್ಣನವರು ತಮ್ಮ ಈ ಕತೆಗಳನ್ನು 'ಹದಿನಾರು ಜೀವನದೃಶ್ಯಗಳು' ಎಂದು ಹೆಸರಿಸಿದ್ದಾರೆ. ಇದು ಇವರ ಪ್ರಥಮ ಕಥಾಸಂಕಲವಾದರೂ ಇಲ್ಲಿರುವ ಕಥೆಗಳು ನಗುವನಂದ, ನುಡಿ, ದೇಶಬಂಧು ಪತ್ರಿಕೆಗಳಲ್ಲಿ, ಹಾಗೂ ಪ್ರಜಾಮತ ಮತ್ತು ವಾಹಿನಿ ದೀಪಾವಳಿ ವಿಶೇಷಾಂಕಗಳಲ್ಲಿ ಪ್ರಕಟಗೊಂಡು ಕನ್ನಡ ಕಥಾಲೋಕದಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದಿದ್ದವು. ಮುಂಬಯಿಯ ಆಕಾಶವಾಣಿಯಲ್ಲಿಯೂ ಸಹ ಇವರ ಕಥಾ-ರೂಪಕಗಳು ಪ್ರಸಾರಗೊಂಡಿದ್ದು ಸದ್ಯ ಅಲಭ್ಯವಾಗಿವೆ. ನಿಜಜೀವನದಲ್ಲಿ ಕಂಡುಬರುವ ಪಾತ್ರಗಳು, ವಿಭಿನ್ನ ಸಂಬಂಧಗಳ ಸೂಕ್ಷ್ಮ ಒಳನೋಟಗಳ ರಸವತ್ತಾದ ಚಿತ್ರಣೆ, ಸಂಭಾಷಣೆಗಳಲ್ಲಿ ಎದ್ದು ಕಾಣುವ ಸಹಜತೆ, ಪ್ರಗತಿಪರ ವಿಚಾರಧಾರೆ, ಸರಳ ಶೈಲಿ, ತಂತ್ರದಲ್ಲಿ ವೈವಿಧ್ಯತೆಯ ಪ್ರಯೋಗ ಎಲ್ಲವೂ ಲಲಿತಾ ರಾಮಣ್ಣನವರು ಉತ್ತಮ ಕತೆಗಾರರೆನ್ನುವುದನ್ನು ಪುಷ್ಟೀಕರಿಸುತ್ತದೆ. ಬದುಕಿನಲ್ಲಿ ಬಹಳಷ್ಟು ನೋವನ್ನುಂಡವರಾದರೂ ಇವರ ಬರವಣಿಗೆಯಲ್ಲಿ ಎದ್ದು ಕಾಣುವ ರಸಿಕತೆ, ಲಘು ಹಾಸ್ಯವು ಕಥೆಗಳಿಗೆ ಮೆರಗನ್ನು ನೀಡಿವೆ. ಮುಂಬಯಿಯ ಬದುಕಿನ ಚಿತ್ರಣ ನೀಡುತ್ತಾ, ಇಲ್ಲಿಯ ಬಹುಭಾಷಿಕ ಪಾತ್ರಗಳನ್ನು ಪರಿಚಯಿಸುವ ಲಲಿತಾ ರಾಮಣ್ಣನವರು ಮುಂಬಯಿಯ ಮಹತ್ವದ ಹಾಗೂ ಅಗ್ರಗಣ್ಯ ಮಹಿಳಾ ಕಥೆಗಾರರು. ಸಮಕಾಲೀನ ಲೇಖಕರ ವಿಚಾರಧಾರೆಯನ್ನು ಮೀರುವಂತಹ ದೃಷ್ಟಿಕೋನ ಹಾಗೂ ಅನುಭವಜನ್ಯ ಕಥಾವಸ್ತು, ಸುಲಲಿತ ನಿರೂಪಣಾ ಶೈಲಿ ಗಮನಸೆಳೆಯುತ್ತದೆ. ಆಕಾಲದ ಬಹಳಷ್ಟು ಮುಂಬಯಿಯ

✍ ಡಾ. ಮಮತಾ ರಾವ್

ಕಥೆಗಾರರು ಸ್ತ್ರೀಯರ ಅಸಹಾಯಕ ಸ್ಥಿತಿ ಹಾಗೂ ದೌರ್ಬಲ್ಯತೆಯನ್ನೇ ಕಥಾವಸ್ತುವನ್ನಾಗಿಸಿ ಸ್ತ್ರೀಕೇಂದ್ರಿತ ಕಥೆಗಳನ್ನು ಬರೆದಿದ್ದಾರೆ. ಈ ಕಥೆಗಳಲ್ಲಿ ಸ್ತ್ರೀಯರ ಮೇಲಾಗುವ ಅತ್ಯಾಚಾರವನ್ನು ಚಿತ್ರಿಸಿದರೇ ವಿನಃ ಆಕೆಯ ಸಮಸ್ಯೆಗಳಿಗೆ ಪರಿಹಾರವನ್ನು ತೋರಿಸುವ ಸಾಧ್ಯತೆ ಮಾತ್ರ ಯಾರಿಗೂ ಕೈಗೂಡಲಿಲ್ಲ. ಆದರೆ ಲಲಿತಮ್ಮನವರ ಕಥೆಗಳಲ್ಲಿ ಆ ಒಂದು ಪ್ರಯತ್ನ ಸಫಲತೆಯನ್ನು ಸಾಧಿಸಿರುವುದನ್ನು ಕಾಣಬಹುದು.

'ಹೆಣ್ಣಿನ ಬಾಳು'-ಕಥೆಯಲ್ಲಿ 'ಬಂಡೀ ಮೇಲಿನ ಹೆಳವನಾದ್ರೂ ಗಂಡ ಅನ್ನೋ ವಸ್ತು' ಇರುತ್ತಿದ್ರೆ ತನ್ನ ಈ ಅವಸ್ಥೆ ಆಗುತ್ತಿರಲಿಲ್ಲ ಎಂದು ಸದಾ ದುಃಖಿಸುತ್ತಿರುವ ಹೆಣ್ಣುಜೀವಿ ಕೇಂದ್ರಪಾತ್ರ. ಮದುವೆಯಾಗೋದೇ ತನ್ನ ಬಾಳಿನ ಧ್ಯೇಯವೆಂದು ಅರಿತು ಅದು ಈಡೇರದಾಗ ಆತ್ಮಹತ್ಯೆಯ ಮೊರೆ ಹೋಗುತ್ತಾಳೆ. ಬೆಳೆದ ಹುಡುಗಿಗೆ ವಿದ್ಯೆ ನೀಡಿ ಒಳ್ಳೆಯ ಕೆಲಸಕ್ಕೆ ಸೇರಿಸಿ ಆರ್ಥಿಕ ಸ್ವಾತಂತ್ರ್ಯ ನೀಡಬೇಕೆನ್ನುವ ನಿರೂಪಕಿಯ ಸಲಹೆ ನಿಜಸ್ಥಿತಿಯಲ್ಲಿ ಸಮಂಜಸವೆನಿಸುತ್ತದೆ. ಅದೇ 'ಪ್ರೀತಿಗಾಗಿ' ಕಥೆಯಲ್ಲಿ ವಿದ್ಯಾವಂತ ಮರಾಠಿ ಬ್ರಾಹ್ಮಣ ಹೆಣ್ಣೊಬ್ಬಳು ತನ್ನ ಹೆತ್ತವರನ್ನು ತೊರೆದು, ತಾನು ಪ್ರೀತಿಸಿದ ಪಂಜಾಬಿಯುವನನ್ನು ಮದುವೆಯಾಗುತ್ತಾಳೆ. ಮದುವೆಯನಂತರ ಪಂಜಾಬಿಗಳಂತೆ ನಡೆನುಡಿ ಎಲ್ಲಕ್ಕೂ ಹೊಂದಾಣಿಕೆ ಮಾಡಿಕೊಂಡು ಬದುಕುತ್ತಾಳೆ. ಆಕೆಯ ಗಂಡನ ಕುಡಿತ ಚಟ; ಅತ್ತೆಮಾವನವರ ಹಿಂಸೆ ಎಲ್ಲವನ್ನೂ ಗರ್ಭಿಣಿಯಾಗಿರುವ ಆಕೆ ತನ್ನ ಪ್ರೀತಿಗಾಗಿ ಸಹನೆಯಿಂದ ಸಹಿಸುವ ಅಗತ್ಯವಾದರೂ ಇದೆಯೇ ಎನ್ನುವುದನ್ನು ಗಂಭೀರವಾಗಿ ಎತ್ತಿತೋರಿಸುವ ಕಥೆ. 'ಕೊರಚಿ'-ಬಡವಿ ಕೊರಚಿಯ ಮೇಲೆ ಆಂಗ್ಲೋ ಇಂಡಿಯನ್ ಗಾರ್ಡ್

ನಡೆಸುವ ದೌರ್ಜನ್ಯವನ್ನು ಕಣ್ಣಾರೆ ಕಂಡರೂ ಅದನ್ನು ಪ್ರತಿಭಟಿಸುವ ಧೈರ್ಯವಿಲ್ಲದ ನಿರೂಪಕಿ "ಇದಕ್ಕೇನು ನಮ್ಮವರ ದುರ್ಬಲತೆ ಎನ್ನಬೇಕೋ, ಇಲ್ಲವೆ ಪರಕೀಯರ ದಬ್ಬಾಳಿಕೆ ಎನ್ನಬೇಕೋ, ಅಥವಾ ಕೊರಚಿಯ ಅದೃಷ್ಟ ಎನ್ನಬೇಕೋ?" ಎಂದು ಪ್ರಶ್ನಿಸುಕೊಳ್ಳುವುದು ಮನುಷ್ಯನ ಹೇಡಿತನದತ್ತ ದೌರ್ಬಲ್ಯದತ್ತ ಬೆರಳು ತೋರುತ್ತದೆ. ಹೆಣ್ಣಿನ ಬಾಳಿನ ನಾನಾ ಅವಸ್ಥೆಗಳನ್ನು ಚಿತ್ರಿಸುವ, ಆಶೆ-ಆಕಾಂಕ್ಷೆಗಳ ಧೈರ್ಯ-ಸ್ಥೈರ್ಯಗಳ ಕಥೆಗಳಾಗಿ-ತಪ್ಪು ಯಾರದು?, ಸೂಳೆಯ ಹೃದಯ, ಶಾರಿಯ ಸಂಸಾರ, ಶೀಲಾ, ಸಿಲ್ಕಿನ ಸೀರೆ, ಇಂದಿರೆಯ ಕಾಗದಗಳು, ನಾಗತ್ತೆ ನೇಣು ಹಾಕಿಕೊಂಡದ್ದು ಮುಂತಾದ ಕಥೆಗಳು ಗಮನ ಸೆಳೆಯುತ್ತವೆ. 'ತೀರದ ಆಸೆ' ಕತೆಯಲ್ಲಿ ಹರೀಶ್ ಎನ್ನುವ ಪಾತ್ರ ಸುಂದರರಾಯರಿಗೆ ವಿಶ್ವಾಸಘಾತ ಮಾಡಿದರೆ, 'ಆಪದ್ಬಂಧು' ಕತೆಯಲ್ಲಿ ಕಿಟ್ಟನಿಗೆ ಡಾಕ್ಟರ್ ಮೊದಲಿಯಾರ್ ಕುರಿತು ಇದ್ದ ತಪ್ಪುಗ್ರಹಿಕೆ ದೂರವಾಗುವುದೇ ವಸ್ತುವಾಗಿದೆ.

'ನಾಗಮ್ಮ' - ಹೆಣ್ಣಿನ ತ್ಯಾಗವನ್ನು, ಪ್ರೀತಿಯನ್ನು ಆಕೆಯ ಹೃದಯ ವೈಶಾಲ್ಯವನ್ನು, ಅವಳ ಮಹತ್ವವನ್ನು ಎತ್ತಿ ಹಿಡಿಯುವ ಕತೆ ಹೇಗೆಯೋ ಹಾಗೆಯೇ ಇವೆಲ್ಲಾ ಗುಣಗಳು ಇದ್ದೂಕೂಡ ಆಕೆಯ ಬಾಳು ನಾಯಿ ಪಾಡಾಗುವುದನ್ನು ಮಾರ್ಮಿಕವಾಗಿ ಚಿತ್ರಿಸುವ ಕತೆ. ಪ್ರೇಮಕ್ಕಾಗಿ ಬಾಳ್ವೆ ನಡೆಸುತ್ತಿದ್ದ ಸಂಸಾರವು ಗಂಡನ ಕಾಮತೃಷ್ಣೆಯಿಂದಾಗಿ ನುಚ್ಚುನೂರಾಗುವ ಪರಿಯನ್ನು ಕಟ್ಟಿಕೊಡುತ್ತದೆ. ಮದುವೆಯಾದ ಹೆಣ್ಣನ್ನು ಬೀದಿಗಿಳಿಸಿ ಸೂಳೆಯೊಬ್ಬಳನ್ನು ಮನೆಯಲ್ಲಿಟ್ಟು ಬಾಳು ಮಾಡುತ್ತಿದ್ದಾಗ ಈ ನಮ್ಮ ಸಮಾಜಕ್ಕೆ ನಮ್ಮ ಧರ್ಮಕ್ಕೆ ಕಣ್ಣಿರಲಿಲ್ಲವೇ? ಎನ್ನುವ ಲೇಖಕಿಯ ಪ್ರಶ್ನೆಗೆ ಉತ್ತರವು ಸಿಗಲಾರದಾಗಿದೆ. ಹೆಣ್ಣಿನ ಮೇಲಾಗುವ ಅತ್ಯಾಚಾರ, ಅನ್ಯಾಯಗಳನ್ನು ಪ್ರಶ್ನಿಸುವ, ಅವಳಿಗೆ ಇದರಿಂದ ಬಿಡುಗಡೆ ನೀಡುವ ಆಶಯವನ್ನು ಹೊಂದಿರುವ ಲಲಿತಮ್ಮನವರ ಕತೆಗಳು ಅವರ ಸಮಕಾಲೀನ ಪುರುಷರ ಕತೆಗಳಿಗಿಂತಲೂ ಪ್ರಗತಿಪರ ವಿಚಾರ ಧಾರೆಯನ್ನು ಹೊಂದಿವೆ. ಹೆಣ್ಣಿಗೆ ಶಿಕ್ಷಣ ಹಾಗೂ ಆರ್ಥಿಕ ಸ್ವಾತಂತ್ರ್ಯದ ಅಗತ್ಯವನ್ನು ತಮ್ಮ ಕತೆಗಳಲ್ಲಿ ಅವರು ಮತ್ತೆ ಮತ್ತೆ ಪ್ರತಿಪಾದಿಸುತ್ತಾರೆ.

ಜೀವನದ ರಸ-ವಿರಸ ಪ್ರಸಂಗಗಳನ್ನೆಲ್ಲಾ ಅತ್ಯಂತ ಕಲಾತ್ಮಕವಾಗಿ ನಿರೂಪಿಸುತ್ತಾ, ರಸಮಯ ಸಂಭಾಷಣೆಯಿಂದ ಅನಿರೀಕ್ಷಿತ ತಿರುವುಗಳಿಂದ ವಾಚಕವರ್ಗವನ್ನು ಬಂಧಿಸುವ ಕಥನಶೈಲಿ ಕರಗತವಾಗಿದ್ದ ಬಹುಮುಖ ಪ್ರತಿಭೆಯ ಶ್ರೀಮತಿ ಲಲಿತಾ ರಾಮಣ್ಣನವರು ಕನ್ನಡದ ಉತ್ತಮ ಕಥೆಗಾರ್ತಿ ಮಾತ್ರವಲ್ಲ ಮುಂಬಯಿ ಕನ್ನಡ ಕಥಾಸಾಹಿತ್ಯದ ಧ್ರುವತಾರೆ.


## MATRIMONIAL

ALLIANCE INVITED FOR A DESHASTHA SMARTHA KANNADA SPEAKING BRAHMIN GIRL WORKING IN MUMBAI FROM PROFESSIONALLY HIGHLY QUALIFIED AND WELL EMPLOYED DESHASTHA SMARTHA / MADHWA BRAHMIN BOY FROM MUMBAI OR BENGALURU.

EDU: B.COM, , C.A, Dip. IFR. D.O.B.: 23.04.1989

Ht: 5'3"

GOTRA: KASHYAPA, NAKSHATRA: ANURADHA

RASHI: VRUSCHIKA

EMAIL ID: mbrao53@gmail.com, Cell No: 9769073494 / 9930754294


## ಆಧುನಿಕ ಸಮಸ್ಯೆ ಚಿಂತನೆಯನ್ನೊಳಗೊಂಡ ಕಥೆಗಳು...

ಮಾತನಾಡುತ್ತಾ, ಮೈಸೂರು ಅಸೋಸಿಯೇಷನ್‌ನ ನನಗೂ ಅವಿನಾಭಾವ ಸಂಬಂಧವಿದೆ. ನನ್ನ ಬರಹವನ್ನು ಪ್ರೋತ್ಸಾಹಿಸುತ್ತ ಬಂದ ಸಂಸ್ಥೆಗಳಲ್ಲಿ ಮೈಸೂರು ಅಸೋಸಿಯೇಷನ್ ಕೂಡ ಒಂದು. ಇದೇ ವೇದಿಕೆಯಲ್ಲಿ ನನ್ನ ಒಂದು ಪುಸ್ತಕವನ್ನು ಕೂಡ ಬಿಡುಗಡೆಗೊಳಿಸಿದ್ದಾರೆ. ಮುಂಬಯಿಯಲ್ಲಿ ಕನ್ನಡ ಪತ್ರಿಕೆಗಳು ಮುದ್ರಣ ಆಗುತ್ತಿದೆ. ಇಲ್ಲಿ ಕನ್ನಡದ ಓದುಗರು ಇದ್ದಾರೆ. ಅಮೂಲ್ಯಯುತವಾದ ಕನ್ನಡ ಕಾರ್ಯಕ್ರಮಗಳನ್ನು ಮೈಸೂರು ಅಸೋಸಿಯೇಷನ್ ಹಮ್ಮಿಕೊಂಡು ಬರುತ್ತಿರುವುದರಿಂದ ಮೈಸೂರು ಅಸೋಸಿಯೇಷನ್‌ಗೆ ವಿಶೇಷ ಆದ್ಯತೆ ಕೊಡುತ್ತೇನೆ. ಕೂಡ ಕನ್ನಡ ಭಾಷೆ, ಸಂಸ್ಕೃತಿಯ ಉಳಿವಿಗಾಗಿ ಶ್ರಮಿಸುತ್ತಿರುವುದು ಅಭಿಮಾನದ ಸಂಗತಿ. ನೇಸರುಗೂ ಮತ್ತು ನನಗೂ ಅವಿನಾಭಾವ ಸಂಬಂಧವಿದೆ. ನೇಸರು ಪ್ರಿಂಟ್ ಆಗುವ ಪ್ರೆಸ್‌ನಲ್ಲಿ ನಮ್ಮ ಸಂಬಂಧವೂ ಪ್ರಿಂಟ್ ಆಗುತ್ತಿರುವುದರಿಂದ ನೇಸರು ಪತ್ರಿಕೆಯನ್ನು ಮೊದಲು ಓದಲು ನನಗೆ ಸಿಗುತ್ತಿದೆ. ಸದ್ಯಕ್ಕೆ ಮುಂಬಯಿಯಲ್ಲಿ ಕನ್ನಡಕ್ಕೆ ಅಪಾಯವಿಲ್ಲ ಆದರೂ ನಮ್ಮ ಭಾಷೆ, ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಮುಟ್ಟಿಸುವ ಜವಾಬ್ದಾರಿ ನಮ್ಮ ಮೇಲಿದೆ. ಮುಂಬಯಿಯ ಅನೇಕ ಸಂಘಸಂಸ್ಥೆಗಳು ಸಾಹಿತ್ಯಸ್ಪರ್ಧೆಯನ್ನು ನಡೆಸುತ್ತಾ ಇವೆ. ಆದರೆ ಕೆಲವರು ಮಧ್ಯದಲ್ಲಿಯೇ ನಿಲ್ಲಿಸಿಬಿಡುತ್ತಾರೆ. ಆದರೆ ಮೈಸೂರು ಅಸೋಸಿಯೇಷನ್ ನೇಸರು ಆ ಪರಂಪರೆಯನ್ನು ಮುಂದುವರಿಸಿಕೊಂಡು ಬರುತ್ತಿರುವುದು ಸಂತೋಷದ ಸಂಗತಿ. ಇನ್ನು ಈ ಕಥಾಸ್ಪರ್ಧೆಯ ತೀರ್ಪುಗಾರನಾಗುವ ಅವಕಾಶ ಸಿಕ್ಕಿದಾಗ, ಕನ್ನಡದ ಉತ್ತಮ ಕಥೆಗಳನ್ನು ಓದುವ ಭಾಗ್ಯ ನನಗೆ ಸಿಕ್ಕಿತು. ಮೊದಲು 25 ಕಥೆಗಳನ್ನು ಆಯ್ಕೆಮಾಡಿಕೊಂಡೆ, ನಂತರ ಅದರಲ್ಲಿ ಒಳ್ಳೆಯ 15 ಕಥೆಗಳನ್ನು ಆಯ್ಕೆಮಾಡಿ ಕೊಟ್ಟೆ. ನಮ್ಮ ಅನೇಕ ಕತೆಗಾರರಿಗೆ ಸ್ಪರ್ಧೆಗೆ ಕಳುಹಿಸುವ ಕಥೆಗಳು ಹೇಗಿರಬೇಕು? ಮತ್ತೆ ಪತ್ರಿಕೆಗಳಿಗೆ ಕಳುಹಿಸುವ ಕತೆಗಳು ಹೇಗಿರಬೇಕು ಎಂದು ಇನ್ನೂ ಸ್ಪಷ್ಟವಾಗಿಲ್ಲವೇನೋ? ಸಾಮೂಹಿಕ ಒಳಿತನ್ನು ನಿರೀಕ್ಷಿಸುವ, ನಿರಾಶಾವಾದಿಗಳಾಗದ ಕತೆಗಳು ಇನ್ನಷ್ಟು ಬರಬೇಕಾಗಿದೆ. ಅದರ ಜೊತೆಗೆ ಸನ್ನಿವೇಶ, ಪಾತ್ರವಿಶ್ಲೇಷಣೆ, ಸೃಜನಶೀಲತೆ, ಕಲ್ಪನೆ-ಕಲಾತ್ಮಕತೆ, ಹರಿತ ಭಾಷೆ, ಆಧುನಿಕ ಸಮಸ್ಯೆ ಚಿಂತನೆಯನ್ನೊಳಗೊಂಡ ಕತೆಗಳು ಹೆಚ್ಚೆಚ್ಚು ಮೂಡಿ ಬರಲಿ, ಕತೆಯೊಂದರಲ್ಲಿ ಹೇಳದೆ ಇರುವುದರ ಕಡೆಗೂ ಓದುಗನನ್ನು ಸೆಳೆಯುವಂತೆ ಹೊಸಕಾಲದ ಕತೆಗಳಿರಲಿ ಎನ್ನುತ್ತಾ ಭಾಗವಹಿಸಿದ ಎಲ್ಲ ಕತೆಗಾರ, ಕತೆಗಾರ್ತಿಯರಿಗೆ, ಬಹುಮಾನಿತರಿಗೆ ಅಭಿನಂದನೆಗಳನ್ನು ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಅಸೋಸಿಯೇಷನ್‌ನ ಅಧ್ಯಕ್ಷರಾದ ಕಮಲಾ ಕೆ ಅವರು ಮಾತನಾಡುತ್ತಾ, ನಾವು ಹಮ್ಮಿಕೊಂಡ ಯೋಜನೆಗಳು ನನಸಾಗುವುದನ್ನು ನೋಡಲು ಮನಸ್ಸಿಗೆ ಮುದನೀಡುತ್ತದೆ. ಕಥೆಗಳನ್ನು ಓದುತ್ತಾ ಹೋದಂತೆ, ಯುವಪೀಳಿಗೆಯಲ್ಲಿ ನಮ್ಮ ಪರಂಪರೆಯ ಮೌಲ್ಯ ಇನ್ನು ಉಳಿಯುತ್ತೆ ಅನ್ನುವ ಭರವಸೆ ಮೂಡಿತು. ನಮ್ಮ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ನಮ್ಮನ್ನು ಪ್ರೋತ್ಸಾಹಿಸಬೇಕು ಎಂದರು.

ಸಭಾಕಾರ್ಯಕ್ರಮದ ನಂತರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಪ್ರಾಯೋಜಕತ್ವದಲ್ಲಿ, ಉದಯೋನ್ಮುಖ ಗಾಯಕಿ ಕು. ಸಂಜನಾ ಕೌಶಿಕ್ ಮತ್ತು ತಂಡ, ಮೈಸೂರು ಅವರಿಂದ ಹಿಂದುಸ್ತಾನಿ ಹಾಡುಗಾರಿಕೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ತಬಲದಲ್ಲಿ ಪ್ರವೀಣ ಮತ್ತು ಹಾರ್ಮೋನಿಯಂ ನಲ್ಲಿ ಜ್ಞಾನೇಶ್ವರ್ ಇವರು ಸಹಕರಿಸಿದರು.

ಕಾರ್ಯಕ್ರಮವನ್ನು ನೇಸರು ಪತ್ರಿಕೆಯ ಸಂಪಾದಕಿ ಡಾ. ಜ್ಯೋತಿ ಸತೀಶ್ ನಿರೂಪಿಸಿ ವಂದಿಸಿದರು.

# ಟ್ಯಾಗೂರರು ಬಂಗಾಲದ ಕಾರಂತರು - ಎಚ್. ಎಸ್. ರಾಘವೇಂದ್ರರಾವ್

ಕಳೆದ ಡಿಸೆಂಬರ್ 9ನೇ ತಾರೀಖಿಗೆ ಶಿವರಾಮ ಕಾರಂತರು ನಮ್ಮನ್ನು ಅಗಲಿ 9 ವರ್ಷ ಆಯಿತು. ಬರುವ ವರ್ಷಕ್ಕೆ ದಶಕಗಳೇ ಕಳೆದು ಹೋಗುತ್ತದೆ.

ಈ ಹತ್ತು ವರ್ಷಗಳಲ್ಲಿ ಅವರನ್ನೂ, ಅವರ ಬರವಣಿಗೆಗಳನ್ನೂ ಪುನಃ ಎಷ್ಟರ ಮಟ್ಟಿಗೆ ಕಂಡುಕೊಳ್ಳುತ್ತಾ ಬಂದಿದ್ದೇವೆ ಎಂದು ನಮ್ಮನ್ನು ನಾವು ಪ್ರಶ್ನಿಸಿಕೊಳ್ಳಬೇಕಿದೆ.

ಈ ನಿಟ್ಟಿನಲ್ಲಿ 2015 ಜನವರಿ 3 ರಂದು ಮೈಸೂರು ಅಸೋಸಿಯೇಷನ್‌ನಲ್ಲಿ ನಡೆದ ಕಾರಂತರನ್ನು ಕುರಿತಾದ ಕಾರ್ಯಕ್ರಮ ಸ್ವಲ್ಪ ಮಟ್ಟಿಗೆ ನ್ಯಾಯ ಒದಗಿಸಿತ್ತೆನ್ನಬಹುದು.

ಸದಾನಂದ ಸುವರ್ಣರು ಸ್ಥಾಪಿಸಿದ ಈ ದತ್ತಿನಿಧಿ ಕಾರ್ಯಕ್ರಮವನ್ನು ಮುಂಬೈ ಕನ್ನಡ ಸಂಘ ಮೈಸೂರು ಅಸೋಸಿಯೇಷನ್ ಹಾಗೂ ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದವರು ಜಂಟಿಯಾಗಿ ನಡೆಸಿಕೊಟ್ಟರು.

ಆ ಸಮಯದಲ್ಲಿ ಶಿವರಾಮ ಕಾರಂತರ ಈ ಕಾರ್ಯಕ್ರಮದ ಉದ್ಘಾಟಕರಾಗಿ ಬಂದವರು ಕನ್ನಡದ ಶ್ರೇಷ್ಠ ವಿಮರ್ಶಕ, ಕವಿ ಸಾಹಿತಿ ಎಚ್. ಎಸ್. ರಾಘವೇಂದ್ರರಾವ್ ಅವರು ಕಾರಂತ್ರ ಕುರಿತಾದ ಅವರ ಕಾದಂಬರಿ ಕುರಿತಾದ ಕೆಲವು ಒಳನೋಟಗಳನ್ನು ನಮ್ಮೊಂದಿಗೆ ಹಂಚಿಕೊಂಡರು.

****

ಹಿರಿಯ ರಂಗತಜ್ಞ ನಿರ್ದೇಶಕ, ಕಲಾವಿದ, ಸದಾನಂದ ಸುವರ್ಣ ಅವರು ಸ್ಥಾಪಿಸಿದ ಡಾ। ಶಿವರಾಮ ಕಾರಂತರ ದತ್ತಿನಿಧಿ ಕಾರ್ಯಕ್ರಮವನ್ನು ಉದ್ಘಾಟಿಸಿ, 'ಕನ್ನಡದ ಕಾದಂಬರಿಗಳಲ್ಲಿ ಕಾರಂತರು' ಎನ್ನುವ ವಿಷಯದಲ್ಲಿ ಉಪನ್ಯಾಸ ನೀಡಿದರು.'

ಕಾರಂತರನ್ನು ಕರ್ನಾಟಕದ ಟ್ಯಾಗೂರ್ ಎಂದು ಗುರುತಿಸುವ ಬದಲಾಗಿ ಟ್ಯಾಗೂರ್‌ರನ್ನೇ ಬಂಗಾಲದ ಕಾರಂತರು ಎಂದು ಗುರುತಿಸುವುದು ಸೂಕ್ತವೇನೋ ಇದು ಮೌಲ್ಯ ಕೊಡುವ ತಕ್ಕಡಿ ಕೆಲಸವಲ್ಲ. ಬದಲಾಗಿ ಸಮಾನವಾಗಿ ಕಾಣುವ ಭಾವ ಎಂದರು.

ಕಾದಂಬರಿ, ವಿಮರ್ಶೆ ವಿಚಾರಕ್ಕೆ ಬರುತ್ತಾ ಕಾದಂಬರಿ ಕ್ಷೇತ್ರದಲ್ಲಿ ಹೆಚ್ಚು ಕೆಲಸ ಮಾಡಿದ ಕಾರಂತರು, ಅನಕೃ, ನಿರಂಜನ, ಕಟ್ಟೀಮನಿ, ಚಿತ್ತಾಲ, ಭೈರಪ್ಪ, ದೇಸಾಯಿ ಇವರೆಲ್ಲರ ಕಾದಂಬರಿಯನ್ನು ಅವುಗಳ ಕಾಲಘಟ್ಟವನ್ನು ಮೊದಲ ಕೃತಿಯಿಂದ ಕಡೆಯದರವರೆಗೆ ಒಂದು ವರ್ಣಪಟಲವಾಗಿ ನೋಡಿದಾಗ ಆ ಕಾದಂಬರಿಗಳಲ್ಲಿ ಕಂಡುಬರುವ ಸಾಮ್ಯ-ವ್ಯತ್ಯಾಸಗಳನ್ನು ಗುರಿತಿಸಿದಾಗ, ಪ್ರತಿಯೊಬ್ಬ ಕಾದಂಬರಿಕಾರ ಕಟ್ಟಿಕೊಟ್ಟ ಲೋಕ ಒಂದಕ್ಕಿಂತ ಒಂದು ಹೇಗೆ ವಿಭಿನ್ನ ಎನ್ನುವುದನ್ನು ಸಾಹಿತ್ಯದ ವಿದ್ಯಾರ್ಥಿಗಳು ಹಾಗೂ ವಿಮರ್ಶಕರು ತಮ್ಮನ್ನು ತಾವು ಕೇಳಿಕೊಳ್ಳಬೇಕಾದಷ್ಟು ಕೇಳಿಕೊಂಡಿಲ್ಲ ಎಂದು ಅಭಿಪ್ರಾಯಪಟ್ಟರು.

ಇಂಗ್ಲೀಷ್ ಅಥವಾ ಫ್ರೆಂಚ್ ಸಾಹಿತ್ಯ ಪ್ರಕಾರಗಳ ವಿಮರ್ಶೆಗಳ ಪರಿಕರಗಳನ್ನು ಎರವಲು ಪಡೆದು ನಮ್ಮ ದೇಶದ ಭಾಷೆ, ಬೇರೊಂದು ಕಾಲದ, ಕಾದಂಬರಿಗಳನ್ನು ಬೆಲೆಕಟ್ಟುವ ಕೆಲಸಕ್ಕೆ ಬಳಸಿಕೊಳ್ಳುವುದು ಅಸಮರ್ಪಕ ಎಂದರು. ನಮ್ಮ ಸಂಸ್ಕೃತಿ, ಪರಂಪರೆ, ಇತಿಹಾಸ, ಇವುಗಳ ಆಧಾರದ ಮೇಲೆ ನಮ್ಮ ಸ್ವಾನುಭವ ಬೆಳೆಸಿ ಕಾದಂಬರಿಗಳನ್ನು ಅರ್ಥಮಾಡಿಕೊಳ್ಳುವ ಕಂಡುಕೊಳ್ಳುವ ಪರಿಕರಗಳನ್ನು ಸ್ವತಃ ನಾವೇ ಸೃಷ್ಟಿಸಿಕೊಳ್ಳಬೇಕಾದ ಅನಿವಾರ್ಯತೆ ಹಿಂದೆಂದಿಗಿಂತಲೂ ಈಗ ಅನಿವಾರ್ಯವಾಗಿದೆ.

ನಮ್ಮ ಕಾದಂಬರಿ ಕ್ಷೇತ್ರ ಸಣ್ಣಕತೆ, ನಾಟಕ ಕ್ಷೇತ್ರ, ಮುನ್ನೆಡೆಯುತ್ತಿರುವ ವೇಗಕ್ಕೆ ವಿಮರ್ಶಾ ಕ್ಷೇತ್ರದ ದತ್ತಿ ಏನೇನೂ ಸಾಲದು. ಇದೇ ನಮ್ಮ ಇಂದಿನ ದೊಡ್ಡ ಸಮಸ್ಯೆ. ಇದರ ಅಗತ್ಯ ಕೇವಲ ಬೆಲೆ ಕಟ್ಟುವುದಕ್ಕಾಗಿಯೇ ಅಲ್ಲ, ಕಾದಂಬರಿಯನ್ನು ಓದುವುದು ಹೇಗೆ ಎಂಬುದಕ್ಕಾಗಿಯೂ ಬಳಸಿಕೊಳ್ಳಬೇಕಿದೆ.

ಕನ್ನಡ ವಿಮರ್ಶಕರಿಗೂ, ಓದುಗಲೋಕದ ತೀರ್ಮಾನಗಳಿಗೂ ವ್ಯತ್ಯಾಸ ಏಕೆ ಬರುತ್ತದೆ? ವಿಭಿನ್ನ ಲೇಖಕರ ಕಾದಂಬರಿಗಳನ್ನು ಓದುವಾಗಿನ ಸ್ವರೂಪವು ಬೇರೆ ಬೇರೆಯಾಗಬೇಕಾಗುತ್ತದೆ.

ಹಾಗೆಯೇ ಪರಸ್ಪರ ಭಿನ್ನವಾದ ರಚನೆಗಳನ್ನು, ಬರಹಗಳನ್ನು ಒಟ್ಟಾಗಿ ನೋಡುವ ಬಗೆಯೂ ತಿಳಿದಿರಬೇಕಾಗುತ್ತದೆ. ಅದಕ್ಕೆ ಕಾರಂತರನ್ನೇ ಉದಾಹರಿಸಿಕೊಳ್ಳುವುದಾದರೆ, ಅವರ ಎಲ್ಲಾ ಕಾದಂಬರಿ ಮೊದಲಿನಿಂದ ಕಡೆಯವರೆಗೂ ಆಗಿರುವ ಬದಲಾವಣೆಯ ಸ್ವರೂಪದ ಚಿತ್ರಣ ಕಟ್ಟಿಕೊಳ್ಳಬೇಕಿದೆ.

20ನೇ ಶತಮಾನದ ಸಾಹಿತ್ಯದ ಕೇಂದ್ರ ಕಥೆ, ಕಾದಂಬರಿಗಳೇ ಹೊರತು ಕಾವ್ಯಗಳಲ್ಲ. ಓದುಗ ಮತ್ತು ಲೇಖಕರ ನಡುವೆ ಜೀವಂತವಾದ ಸಂವಾದವನ್ನು ಹುಟ್ಟಿಸಿಕೊಂಡಿದ್ದು, ಕಥೆ ಕಾದಂಬರಿಗಳೇ ಎಂದು ಅಭಿಪ್ರಾಯಪಟ್ಟರು.

ಸಮಾಜದ ನಿಜವಾದ ತುಡಿತಗಳನ್ನು, ಅನುಭವಗಳನ್ನು, ಬದಲಾವಣೆಗಳನ್ನು ಮತ್ತೆ ಮತ್ತೆ ದಾಖಲಿಸುವ ಕೆಲಸ ಕಥೆ ಕಾದಂಬರಿ ಮಾಡುತ್ತಾ ಬಂದಿದೆ. ಓದುಗರಿಗೆ ಹತ್ತಿರವಾಗುತ್ತಾ ಬಂದಿವೆ. ಒಬ್ಬ ವ್ಯಕ್ತಿಯ ಜೀವನದಲ್ಲಿ ಕಾಲಾನುಕ್ರಮವಾಗಿ ಆಗುವ ಸೂಕ್ಷ್ಮಾತಿಸೂಕ್ಷ್ಮ ಬದಲಾವಣೆಗಳನ್ನು ಕಾದಂಬರಿಯ ಬದಲಾಗುತ್ತಿರುವ ಸ್ವರೂಪಗಳಲ್ಲಿ ನಾವು ಕಾಣಬಹುದಾಗಿದೆ.

ಒಂದೇ ಕಾದಂಬರಿ ಹಲವು ಬಾರಿ ಓದಿಸಿಕೊಂಡಾಗ, ಪ್ರತೀ ಬಾರಿ ವಿಭಿನ್ನ ಅನುಭವಗಳನ್ನು ಒದಗಿಸಬಲ್ಲದು. ಏಕೆಂದರೆ ಬದಲಾಗುತ್ತಿರುವ ನಾವು ನಮ್ಮಿಂದ ಕಾದಂಬರಿ ಬದಲಾಗುತ್ತದೆ. ಈ ಕಾರಣಗಳಿಂದ ಲೇಖಕನು ತನ್ನನ್ನು ತಾನು ಸಮಾಜದ ಬದಲಾವಣೆಗೆ ಅನುಗುಣವಾಗಿ ತನ್ನನ್ನು ತಾನು ಒಗ್ಗಿಸಿಕೊಳ್ಳಬೇಕಾಗುತ್ತದೆ. ಆ ಕಾರಣದಿಂದ ಓದುಗರನ್ನು ನಿರ್ಲಕ್ಷಿಸದೆ ಬರೆಯಬೇಕಾದ ಒತ್ತಡ, ಒತ್ತಾಯ ಲೇಖಕನ ಮೇಲಿರುತ್ತದೆ.

ಇಂಥಹ ಬದಲಾವಣೆಗಳು ತೇಜಸ್ವಿ, ಲಂಕೇಶ್ ಅಂಥವರ 'ಬಿರುಕು', 'ಸ್ವರೂಪ', ಕಾದಂಬರಿಗಳಿಂದ 'ಕಲ್ಲು ಕರಗುವ ಸಮಯ', 'ಕರ್ವಾಲೋ' ಓದಿದಾಗ ಅರಿವಿಗೆ ಬರುತ್ತದೆ.

ಹಾಗೆಯೇ ಕುವೆಂಪು ಅವರ 'ಕಾನೂರು ಹೆಗ್ಗಡತಿ' ಯಿಂದ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ನಡುವಿನ ವ್ಯತ್ಯಾಸದಲ್ಲಿ ಗೋಚರವಾಗುತ್ತದೆ. ದೇವನೂರು ಮಹದೇವ ಅವರ 'ಒಡಲಾಳ' ಕಾದಂಬರಿಯಿಂದ 'ಕುಸುಮಬಾಲೆ'ಯ ವರೆಗೆ ಆಗಿರುವ ಬದಲಾವಣೆ ಇವೆಲ್ಲವನ್ನೂ ಕಂಡುಕೊಂಡಾಗ ಓದುಗರ ಸ್ವರೂಪ ಬದಲಾದ ಹಾಗೆ. ಲೇಖಕರೂ ಬದಲಾಗಿರುವ ಕುರುಹುಗಳು ಅರಿವಿಗೆ ಬರುತ್ತದೆ. ಇದು ಎಲ್ಲಾ ಲೇಖಕರಿಗೂ ಅನ್ವಯಿಸುತ್ತಾ ಬಂದಿದೆ.

ಈ ಎಲ್ಲಾ ಬದಲಾವಣೆಗೆ ಒಳಪಟ್ಟೂ ಕೂಡ ಸರ್ವಕಾಲಕ್ಕೂ ಓದಿಸಿಕೊಳ್ಳಬಲ್ಲ ಶಕ್ತಿ ಒಂದು ಕಾದಂಬರಿಗೆ ಇದ್ದರೆ, ಅದೇ ಶ್ರೇಷ್ಠ ಕಾದಂಬರಿ. ಇಂಥಹ ಶ್ರೇಷ್ಠ ಕಾದಂಬರಿಗಳ ಗುಣಲಕ್ಷಣಗಳನ್ನು ವಿಶ್ಲೇಷಿಸಿದಾಗ ಒಬ್ಬ ಒಳ್ಳೆಯ ಕಾದಂಬರಿಕಾರ ತನ್ನ ಕಾಲಕ್ಕೆ ಪ್ರಸ್ತುತವಾಗಿದ್ದನ್ನು ಬರೆಯುವುದರ ಜೊತೆ ಜೊತೆಗೆ ಮುಂಬರುವ ಕಾಲಕ್ಕೂ, ಸರ್ವಕಾಲಕ್ಕೂ ಓದಿಸಿಕೊಳ್ಳುವಂತ ಕಾದಂಬರಿಯನ್ನೇ ಬರೆಯಬೇಕಾಗುತ್ತದೆ. ಅಂಥಹ ಮಾರ್ಗಗಳನ್ನು ಸಾಧ್ಯವಾಗಿಸಿಕೊಳ್ಳುವ ಬಗೆಯ ಬಗ್ಗೆ ಚಿಂತನೆಯ ಅವಶ್ಯಕತೆ ಇರುತ್ತದೆ. ಹೀಗೆ ಓದುಗರಿಂದ ಓದಿಸಿಕೊಳ್ಳುವ ಶಕ್ತಿ ಕಥೆಗೆ ತರುವುದು ಮುಖ್ಯವಾಗುತ್ತದೆ. ಇಂಥಹ ಶಕ್ತಿ ಮಾಸ್ತಿ, ಬೇಂದ್ರೆ, ಕಾರಂತರಂತವರ ಬರಹಗಳಿಗಿದೆ ಎಂದು ರಾಘವೇಂದ್ರರಾವ್ ಅವರು ಅಭಿಪ್ರಾಯಪಡುತ್ತಾರೆ.

ವಿ. ಅರ್ಪಣ ರಾವ್

ಇಡೀ ಒಟ್ಟು ಭಾರತೀಯ ಭಾಷೆಗಳ ಕಾದಂಬರಿಯ ಬಗ್ಗೆ ಮಾತನಾಡಬೇಕಾದರೂ ಕೂಡ ಕಾರಂತರು, ಮುಖ್ಯವಾಗುತ್ತಾರೆ. ಕಳೆದ 70, 80 ವರ್ಷಗಳಲ್ಲಿ ಬಂದ ಕಾದಂಬರಿಗಳಲ್ಲಿ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಗುಂಪಿನ ಕಾದಂಬರಿ ಹುಟ್ಟಿಕೊಂಡವು. ಈ ಎಲ್ಲಾ ಗುಂಪಿನ ಕಾದಂಬರಿಗಳ ಮೂಲ ಮಾದರಿ ಕಾರಂತರ ಕಾದಂಬರಿಗಳಲ್ಲಿದೆ. ಅದು, ಸ್ತ್ರೀ ಕೇಂದ್ರಿಕೃತ ಹಿಂದುಳಿದ, ಶೋಷಿತರ ಕಾದಂಬರಿಗಳಿರಬಹುದು. ಕಲಾವಿದರನ್ನು ಕುರಿತ ಅವರ ಬೆಳವಣಿಗೆ, ಪಾಡು, ಒಳಶೋಧನೆ ಎಲ್ಲವನ್ನೂ ಒಳಗೊಂಡಂತಹ ಕಾದಂಬರಿ. ಎಲ್ಲದಕ್ಕೂ ಕಾರಂತರ ಸರಸಮ್ಮನ ಸಮಾಧಿ, ಚೋಮನದುಡಿ, ಕಾದಂಬರಿಗಳೇ ಮೂಲ ಮಾದರಿ.

ಸಂಸಾರ ಹಾಗೂ ಪಲಾಯನ ವಸ್ತು ಕೇಂದ್ರಿತ ಕಾದಂಬರಿಗಳು, ಕುಟುಂಬವೆಂಬ ವ್ಯವಸ್ಥೆಯಿಂದ ಹೊರಹೋಗುವ ಪ್ರವೃತ್ತಿಯನ್ನು ಕುರಿತು ಪ್ರಶ್ನಿಸುವ ಕೆಲಸವನ್ನು ಕಾರಂತರ 'ಸನ್ಯಾಸಿಯ ಬದುಕು' ಕಾದಂಬರಿ ಮಾಡುತ್ತದೆ. 'ಬೆಟ್ಟದ ಜೀವ' ಕಾದಂಬರಿಯ 'ಶಂಭು' ಹಳ್ಳಿಯ ಬದುಕಿನ ವೈಪರೀತ್ಯಗಳ ಪ್ರತಿಬಿಂಬವಾಗಿದ್ದಾನೆ.

ಈ ಬದಲಾವಣೆ ಆಧುನಿಕತೆ ಅನಿವಾರ್ಯವೆಂದು ಗ್ರಹಿಸಿದ ಕಾರಂತರು ತಮ್ಮ ಬರವಣಿಗೆಯಲ್ಲಿ ಹಳೆಯದರ ಜೊತೆಗೆ ಹೊಸದನ್ನೂ ಹಿಡಿದು ಎರಡನ್ನೂ ಮಿಡಿದು ಸತ್ಯವನ್ನು ಕಂಡುಕೊಳ್ಳುವ, ಸಕಾರಾತ್ಮಕ ಚಿಂತನೆಗೆ ಹಚ್ಚುವ ಕೆಲಸವನ್ನು ಮಾಡಿದ್ದಾರೆ.

ಕಾರಂತರೆಂದೂ ಕಡು ಸಂಪ್ರದಾಯವಾದಿಗಳಾಗಿರಲಿಲ್ಲ. ನಾರಾಯಣ್ ಅವರು ಹೇಳುವಂತೆ ಭಾರತದ ಸಂಸ್ಕೃತಿ ಪರಂಪರೆಯನ್ನು ಕಾರಂತರು ಪ್ರವಾಸಿಯಂತೆ ಹೊರನಿಂತು ಆಸಕ್ತಿಯಿಂದ ಶಾಸ್ತ್ರಜ್ಞನ ದೃಷ್ಟಿಕೋನದಿಂದ ದರ್ಶಿಸಿದ್ದಾರೆ. ಆದರೆ ಮಾಸ್ತಿಯವರು ಇದೇ ಸಂಸ್ಕೃತಿ ಪರಂಪರೆಯನ್ನು ತೀರ್ಥಯಾತ್ರೆಗೆ ಬರುವ ಭಕ್ತಿ, ನಂಬಿಕೆಯುಳ್ಳ ಯಾತ್ರಿಕನಂತೆ ದರ್ಶಿಸಿದ್ದಾರೆ. ಹೀಗಿರುವಾಗ ನಾವು ಪರಂಪರೆ, ಸಂಸ್ಕೃತಿಯನ್ನು ಯಾವ ದೃಷ್ಟಿಕೋನದಿಂದ ನೋಡುತ್ತಿದ್ದೇವೆ ಎಂಬ ಪ್ರಶ್ನೆ ಹಾಕಿಕೊಳ್ಳಬೇಕಿದೆ. ಆಗ ನಮ್ಮ ಅರಿವಿಗೆ ಬರುವುದು ನಮ್ಮ ಪೀಳಿಗೆ ಎರಡರ ನಡುವಿನ ದ್ವಂದ್ವದಲ್ಲಿ ಸಿಲುಕಿರುವುದು ಗೊತ್ತಾಗುತ್ತದೆ.

ಕಾರಂತರ ಕಾದಂಬರಿಗಳು ವಿಚಾರಶೀಲತೆಯಿಂದ, ಒಳನೋಟಗಳನ್ನು ಬೆಳೆಸುತ್ತಾ ನಮ್ಮ ಬದುಕಿನಲ್ಲಿ ಮೀಟುಗೋಲಾಗಿ ಕೆಲಸ ಮಾಡುತ್ತದೆ. ನಮ್ಮನ್ನು ನಮ್ಮದೇ ಜೀವನವನ್ನು ಕುರಿತು ಚಿಂತನೆಗೆ ಒಳಪಡಿಸುತ್ತದೆ.

ಹೀಗೆ ಒಳ್ಳೆಯ ಕಾದಂಬರಿ ಓದಿದಾಗ ನಮ್ಮದೇ ಆದ ಇನ್ನೊಂದು ಕಾದಂಬರಿ ಹುಟ್ಟಿಸುವ ಕೆಲಸ ಆಗುತ್ತದೆ. ಅದು ನಮ್ಮ ಅನುಭವದ ಆಧಾರಕ್ಕೆ ಅನುಗುಣವಾಗಿ ಹುಟ್ಟಿದುದಾಗಿರುತ್ತದೆ. ಕಿಂಗ್ ಲಿಯರ್ ಕಾದಂಬರಿಯಂತೆ ಕಾರಂತರ ಕಾದಂಬರಿಗಳೂ ಈ ಕೆಲಸ ಮಾಡುತ್ತದೆ. ನಮ್ಮ ಕಾಲದಲ್ಲಿ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಯೆಂದರೆ ನಾವು ಸಮಾಜದ ಕುರಿತು ಬರೆಯಬೇಕೋ ಅಥವ ನಮ್ಮ ಜೀವನದ ಕುರಿತು ಬರೆಯಬೇಕೋ? ಹಾಗೆ ಕೇಳಿಕೊಂಡಾಗ ಒಮ್ಮೊಮ್ಮೆ ಸಮಾಜವನ್ನು ಪ್ರತಿನಿಧಿಸುವಾಗ ಒಬ್ಬ ವ್ಯಕ್ತಿಯ ವೈಯಕ್ತಿಕ ನೆಲೆಯನ್ನು ನಿರ್ಲಕ್ಷಿಸುವ ಸಂದರ್ಭ ಬರುತ್ತದೆ. ಹಾಗೆಯೇ ವ್ಯಕ್ತಿ ಕೇಂದ್ರೀಕೃತವಾದಾಗ ಸಮಾಜ ನಿರ್ಲಕ್ಷ್ಯಕ್ಕೆ ಒಳಪಡುತ್ತದೆ. ಹೀಗಿರುವಾಗ ಎರಡನ್ನೂ ಕಟ್ಟಿಕೊಳ್ಳುವ ಬಗೆಹೇಗೆ? ಇದೇ ಇಂದಿನ ದೊಡ್ಡ ಸವಾಲು.ಮನುಷ್ಯನನ್ನು ಮನುಷ್ಯನಾಗಿ, ಸಮುದಾಯವನ್ನು ಸಮುದಾಯವಾಗಿ, ಸಮಾಜವನ್ನು ಸಮಾಜವಾಗಿ ಎಲ್ಲವನ್ನೂ ಒಂದು ಕೃತಿಯಲ್ಲಿ ಕಟ್ಟುವುದು ಒಬ್ಬ ಕಾದಂಬರಿಕಾರನಿಗೆ ನಿಜವಾದ ಸವಾಲು. ಇಂಥಹ ಕೆಲಸವನ್ನು ಕುವೆಂಪು, ಕಾರಂತರು, ಚಿತ್ತಾಲರಂಥವರು ಮಾಡಿದ್ದಾರೆ. ಇಂಥವರ ಕಾದಂಬರಿಗಳು ಸರ್ವಕಾಲಕ್ಕೂ ಸಲ್ಲುವಂಥ ಗುಣವುಳ್ಳದ್ದು.

ಜೀವನದ ಲಯ ಹಾಗೂ ಸಮಾಜದ ಲಯ ಪರಸ್ಪರ ಒಂದರ ಮೇಲೊಂದು ಪ್ರಭಾವ ಬೀರುತ್ತದೆಯೇ? ಮನುಷ್ಯರ ಒಳ ಮನಸ್ಸನ್ನು ಬದಲಾಯಿಸುವ ಶಕ್ತಿ ಹೊರ ಬದಲಾವಣೆಗಿದೆಯೇ? ಉದಾ:- ಮೊಬೈಲ್, ಕಂಪ್ಯೂಟರ್, ಇದಕ್ಕೆ ಉತ್ತರ ನಾವೇ ಕಂಡುಕೊಳ್ಳಬೇಕಿದೆ.

ಇಂತಹ ಪ್ರಶ್ನೆಗಳನ್ನು ಕಾರಂತರು ತಮ್ಮ ಕಾದಂಬರಿಗಳಲ್ಲಿ ಸತತವಾಗಿ ಕೇಳಿಕೊಂಡಿದ್ದಾರೆ. ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಬಂದಿದ್ದಾರೆ. ಆ ಕಾರಣಕ್ಕೆ ಅವರ ಕಡೆಯ ಕಾದಂಬರಿಗಳಲ್ಲಿ ಅಸಹಿಷ್ಣುತೆ ಕಂಡುಬರುತದೆ ಎನಿಸುತ್ತದೆ. ಈ ಕಾರಣದಿಂದ 'ಚೋಮನ ದುಡಿ' ಯಲ್ಲಿದೆ ಸಮಾಜವಾಗಿ ಮನೋಭಾವ ನಂತರದ ದಿನಗಳಲಿ ಬರೆದ ಕಾದಂಬರಿಗಳಲಿ ವೈಚಾರಿಕ ಮನೋಭಾವದ ಪರಿಣಾಮವಾಗಿ ಅವರನ್ನು ಏನನ್ನಾಗಿ ಮಾಡಿತು ಎಂಬುದರ ಬಗ್ಗೆ ಯೋಚಿಸುವಂತೆ ಮಾಡುತ್ತದೆ. ಕೊನೆಕೊನೆಗೆ ಎಲ್ಲಾ ಬದಲಾವಣೆ ಮೇಲೆಯೂ ಅವರಿಗೆ ಅಸಹನೆಯಾದಂತೆ ತೋರುತ್ತದೆ.

ಕುವೆಂಪು ಕಾದಂಬರಿಗಳಲ್ಲಿನ ಬದಲಾವಣೆ, ಕಾರಂತರ ಕಾದಂಬರಿಗಳಲ್ಲಿನ ಬದಲಾವಣೆ ಹೋಲಿಸಿ ನೋಡಿದಾಗ ಸಾಕಷ್ಟು ಒಳನೋಟುಗಳು ದೊರೆಯುತ್ತವೆ.

ಕಾರಂತರು ಯಾವತ್ತೂ, ಧರ್ಮ, ಅನುಭಾವ, ಭಕ್ತಿಯನ್ನು ಗೌರವದಿಂದ ನೋಡಿದ ಯಾವ ಉದಾಹರಣೆಯೂ ಸಿಗುವುದಿಲ್ಲ. ಆದರೇ ಆದೇ ಕಾರಂತರು, ಶಿಲ್ಪ, ಚಿತ್ರಕಲೆ, ನೃತ್ಯ, ಯಕ್ಷಗಾನಗಳ ಬಗ್ಗೆ ವಿವರವಾಗಿ ಬರೆದರು. ಅಂದರೆ ಕಾರಂತರ ನಾಸ್ತಿಕವಾದದ ಹಾಗೂ ಭಾರತೀಯ ಸಂಸ್ಕೃತಿಯ ನಡುವಿನ ಸಂಬಂಧ, ಎಂಥಹುದು ಎಂಬುದು ತಿಳಿಯಬೇಕಾದ ವಿಶಯ. ಈ ಮನಃಸ್ಥಿತಿ ನಮ್ಮ ಕಾಲದವರಿಗೆ ಸಾಧ್ಯವೇ? ಧರ್ಮದ ಬಗ್ಗೆ ಅತಿಯಾದ ಕಾಳಜಿ ತೋರಿಸದೆಯೂ ಕೂಡ ಸಂಸ್ಕೃತಿಯನ್ನು ಕಾಪಾಡಿಕೊಳ್ಳಲು ಸಾಧ್ಯ ಎಂಬುದನ್ನು ಕಾರಂತರು ತೋರಿಸಿಕೊಟ್ಟರು. ಇದು ಕಾರಂತರ ವಿಶಿಷ್ಟವಾದ ಗುಣ. ಇದನ್ನು ನೋಡಿಯೇ ತೇಜಸ್ವಿಯವರು ಹೀಗೆ ಹೇಳುತ್ತಾರೆ. "ಕಾರಂತರ ವೈಚಾರಿಕತೆ ಕುವೆಂಪು ಅವರ ಕಲಾಪ್ರಜ್ಞೆ - ನನ್ನನ್ನು ಬೆಳೆಸಿತು' ಎಂದು. ಮುಂಡೆ ಅವರು ಅದಕ್ಕೆ 'ಲೋಹಿಯಾ ಅವರ ಸಮಾಜವಾದ'ವನ್ನೂ ಸೇರಿಸಿಕೊಳ್ಳುತ್ತಾರೆ. ಆದರೆ ಅವರು ಕವಿ ಅಲ್ಲದ ಕಾರಣಕ್ಕೋ ಏನೋ ಬೇಂದ್ರೆಯವರನ್ನು ನೆನೆಸಿಕೊಳ್ಳಲೇ ಇಲ್ಲ.

ಕಾರಂತರಿಗೆ ತಂತ್ರಜ್ಞಾನ, ವಿಜ್ಞಾನ ಆಧುನಿಕತೆ ಮತ್ತು ವಿಚಾರವಾದ ಇವಿಷ್ಟು "ದೀಪವೂ ಆಯಿತು ಕಣ್ಣೂ ಕಟ್ಟು ಆಯಿತೇನೋ" ಅನ್ನುವ ಮಾತನ್ನು ಎಚ್.ಎಸ್.ರಾಘವೇಂದ್ರರಾವ್ ಅವರು ಬಳಸುತ್ತಾರೆ. ಉದಾಹರಣೆಗೆ ಅವರ 'ಬಾಳ್ವೆಯ ಬೆಳಕು' ಇಂಥಹುದೇ ಪ್ರಭಾವವನ್ನು ಸ್ವತಃ ಅವರಿಗಷ್ಟೇ ಅಲ್ಲದ್ದೆ ನನ್ನಂಥವರ ಮೇಲೂ ಆಯಿತು ಎಂದು ರಾಘವೇಂದ್ರ ರಾವ್ ಹೇಳುತ್ತಾರೆ. ಕಣ್ಣಿಗೆ ಕಾಣದ ನಾಳೆ ಕಾಣಬಹುದಾದ ಸತ್ಯವನ್ನು ಕಾರಂತರನ್ನೊಳಗೊಂಡಂತೆ ಅನೇಕರಾದ ನಾವೂ ತಿರಸ್ಕರಿಸಿದ್ದೇವೆ ಎಂದು ಅಭಿಪ್ರಾಯಪಡುತ್ತಾರೆ. ಕಾರಂತರು ಹೇಗೆ ಭೂತಕಾಲವನ್ನು ಪ್ರಶ್ನಿಸಿದರೋ ಹಾಗೆಯೇ ನಾವೂ ಕಾರಂತರನ್ನು ಪ್ರಶ್ನಿಸಬೇಕಾಗಿದೆ. ಕಾರಂತರ ವೈಚಾರಿಕತೆ ಅವರಿಗೆ ವಿಚಾರಗಳ ಆಚೆಯ ಲೋಕವನ್ನು ಕಾಣಲು ಅಡ್ಡಿಯಾಯಿತು ಅನ್ನಿಸುತ್ತದೆ ಎಂದರು.

ಕಾರಂತರಿಗೆ ಯಾವತ್ತೂ ಕೂಡ ಶಂಭಾ ಜೋಶಿ ಇಷ್ಟವಾದಷ್ಟು ಬೇಂದ್ರೆ ಇಷ್ಟವಾಗಲಿಲ್ಲ. ಏಕೆ? ಎಂದು ಪ್ರಶ್ನಿಸುತ್ತಾರೆ. ಇಬ್ಬರ ಹುಡುಕಾಟದ ಹಾದಿ ಭಿನ್ನವಾದುದೇ ಕಾರಣವೇ? ಈ ವಿಷಯದ ಕುರಿತು ನಾವು ನೀವು ಯೋಚಿಸಬೇಕಾದ್ದು ಏನು? ಎಂದು ಪ್ರಶ್ನಿಸುತ್ತಾರೆ.

ನಾವೆಲ್ಲರೂ ವೈಜ್ಞಾನಿಕತೆಯನ್ನು ತಲೆಯಮೇಲಿಟ್ಟು ಮೆರೆಸುತ್ತಾ ಬಂದಿದ್ದೇವೆ. ಆ ವೈಜ್ಞಾನಿಕ ಚೌಕಟ್ಟು ನಮಗೆ ಕೊಟ್ಟಿರುವ ಸತ್ಯ ತಿಳುವಳಿಕೆ ಎಂಥದ್ದು? ತಪ್ಪು ವಿಜ್ಞಾನದಲ್ಲಿಲ್ಲ, ಅದನ್ನು ಅರ್ಥೈಸಿಕೊಳ್ಳುವ ರೀತಿಯಲ್ಲಿದೆ. ಈ ನಿಟ್ಟಿನಲ್ಲಿ ತರ್ಕ ಮತ್ತು ವೈಚಾರಿಕತೆ ತಡೆಗೋಡೆಯಂತಿದೆ ಎಂದು ಅಭಿಪ್ರಾಯಪಟ್ಟರು.

ಹಾಗೆಯೇ ಕಾರಂತರ ಸ್ತ್ರೀಪಾತ್ರಗಳು, ಹೆಣ್ಣಿನ ತ್ಯಾಗದ, ದುಃಖ

ವೈಭವೀಕರಣ" ಎಂದು ಅನಿಸಿಕೆ ವ್ಯಕ್ತಪಡಿಸಿದರು.

ಕಾರಂತರಷ್ಟೇ ಅಲ್ಲದೆ ಅವರ ಪೀಳಿಗೆಯ ಅನೇಕ ಲೇಖಕರು ತಮ್ಮ ಕಣ್ಣಿಗೆ ಸರಿ ಎಂದು ತಿಳಿದ ಆಧುನಿಕ ವೈಚಾರಿಕತೆಗಳನ್ನು ಹೆಣ್ಣಿಗೆ ಅನ್ವಯಿಸಲು ಏಕೆ ಪ್ರಯತ್ನಿಸಲಿಲ್ಲ? ಕಾರಂತರ ಸ್ತ್ರೀ ಪಾತ್ರಗಳನ್ನು ಪುರುಷ ಪಾತ್ರದೊಂದಿಗೆ ಹೋಲಿಸಿದಾಗ, ಸ್ತ್ರೀ ಪಾತ್ರಗಳಿಗೆ ಕೊಟ್ಟಂತಹ ಹುಡುಕಾಟದ ಮಾದರಿಗಳಾವುವು? ಆಗಿನ ಎಲ್ಲಾ ಲೇಖಕರು ವಿದ್ಯಾವಂತೆಯಾದ ಸ್ವಾಲಂಬಿಯಾದ ಹೆಣ್ಣನ್ನು ನೋಡಿದ ಬಗೆ ಹೇಗೆ?

ವಿದ್ಯಾರ್ಜನೆ, ಉದ್ಯೋಗ ಇದರಿಂದ ಬರಬಹುದಾದ ಮಾನಸಿಕ ಬಿಡುಗಡೆ ಆರ್ಥಿಕ ಸ್ವಾವಲಂಬಿತನ ಇದನ್ನು ಕನ್ನಡ ಸಾಹಿತ್ಯಲೋಕ ಕಾಣಬೇಕಾದಷ್ಟು ಪ್ರೀತಿ ಗೌರವಗಳಿಂದ ಕಾಣಲಿಲ್ಲ ಎಂಬುದು ಅವರ ಅಭಿಪ್ರಾಯ.

ಜೀವನಕ್ರಮದಲ್ಲೇ ಬದಲಾವಣೆಯನ್ನು ನೋಡಿದ, ಸ್ವಾವಲಂಬಿಯಾದ ಹೆಸರನ್ನು ಗೌರವದಿಂದ ಕಂಡ ಮುಂಬೈ ಲೇಖಕ, ಲೇಖಕಿಯರ ಸ್ತ್ರೀ ಪಾತ್ರಗಳಲ್ಲಿನ ಗಟ್ಟಿತನ ಅದು ಚಿತ್ತಾಲ, ಬಲ್ಲಾಳರು, ಮಿತ್ರಾ, ತುಳಸಿ ಇಂಥವರ ಚಿತ್ರಿಸಿದ ಹೆಣ್ಣಿನ ಪರಿಕಲ್ಪನೆ ಹಳೇಮೈಸೂರು, ಹೊಸ ಕರ್ನಾಟಕದ ಕಡೆ ಹೇಗೆ ಬೇರೆ ಬೇರೆ ಆಯಿತು? ಮುಂಬೈ ನಗರದ ಹೆಣ್ಣಿನ ಬದುಕಿನ ಅನುಭವ ವಿನ್ಯಾಸಗಳು ಅವರನ್ನು ವಿಮೋಚನೆ ಹೊಂದಿದ ಸ್ತ್ರೀ ಎಂದು ಕಾಣಲು ಸಾಧ್ಯವಾಗುವ ಬದುಕನ್ನು ಸಕಾರಾತ್ಮಕ ರೀತಿಯಲ್ಲಿ ಕಟ್ಟಿಕೊಳ್ಳುವ ಚಿತ್ರಣ ನಮ್ಮ ಕಡೆ ಏಕೆ ಸಾಧ್ಯವಾಗಲಿಲ್ಲ ಎಂದು ಪ್ರಶ್ನಿಸುತ್ತಾರೆ.

ಕೇವಲ ಚಿತ್ತಾಲರು, ಲಂಕೇಶರಿಗೆ ಮಾತ್ರ ಆ ಚಿತ್ರಣ ತರಲು ಸಾಧ್ಯವಾಯಿತು. ಅನಂತ ಮೂರ್ತಿಯವರ ಸ್ತ್ರೀಪಾತ್ರವನ್ನು ಚಿತ್ತಾಲರ ಸ್ತ್ರೀಪಾತ್ರದೊಂದಿಗೆ ಹೋಲಿಸಿ ನೋಡಿದಾಗ ಕಾಣುವ ಸತ್ಯ ಯಾವುದು? ಮುಂಬೈ ಹೆಣ್ಣುಗಳ ಜೀವನ ಕ್ರಮ, ಕನ್ನಡ ನೆಲದ ಹೆಣ್ಣುಗಳ ಜೀವನಕ್ರಮವನ್ನು ದೃಷ್ಟಿಕೋನವನ್ನು ಬದಲಾಯಿಸಲು ಸಾಧ್ಯ ಆಯಿತಾ? ಕಾರಂತರ ಕಾದಂಬರಿಗಳಲ್ಲಿ ಬರುವ ಸ್ತ್ರೀ ಪಾತ್ರಗಳ ಧಾರಣ ಶಕ್ತಿ ಇದೆ ಎಂದು ಹೇಳಲಾಗುವ ಸರಸ್ವತಿ, ಪಾರ್ವತಿ, ನಾಗವೇಣಿ ಇತ್ಯಾದಿ ಹೆಣ್ಣುಗಳಲ್ಲಿ ಇರುವಷ್ಟೇ ಸಮಾನವಾಗಿ ಅವರೇ ಚಿತ್ರಿಸಿದ ಆಧುನಿಕ, ವಿದ್ಯಾವಂತ ಮಹಿಳೆಯರಲ್ಲಿ ಇರುವುದಿಲ್ಲ ಏಕೆ? ಎಂಬುದನ್ನು ಪ್ರಶ್ನಿಸಬೇಕಾಗುತ್ತದೆ ಎಂದರು. ಹಾಗೆಯೇ ಕಾರಂತರು ಬರವಣಿಗೆಯಲ್ಲಿ ಬರೆಯುವ ರೀತಿಯಲ್ಲಿ ಬದಲಾವಣೆ ಮಾಡಿಕೊಳ್ಳಲಿಲ್ಲ ಏಕೆ?

ನಾವು ಯಾವುದನ್ನು ವಿಶ್ಲೇಷಣಾ ಮನೋಭಾವ, ವಾಸ್ತವವಾದ ಎಂದು ಕರೆಯುತ್ತೇವೆ. ಅದನ್ನು ಮೊದಲಿಂದ ಕಡೆಯವರೆಗೆ ಬಳಸಿಕೊಂಡೇ ಬಂದರು. ಚಿತ್ತಾಲರಲ್ಲಾದ ಬದಲಾವಣೆ ಬೇರೆಯವರಲ್ಲೂ ಆಯಿತೇ ಎಂಬುದನ್ನು ಪ್ರಶ್ನಿಸಿದರು.

●

# ಹಳಕಟ್ಟಿಯವರ ಬದುಕು ಸಾಧನೆ ನಾಡಿಗೆ ಮಾದರಿ : ಡಾ.ಪಿ.ಕೆ. ರಾಠೋಡ್

**ಪ.ಗು. ಹಳಿಕಟ್ಟಿಯವರದು ಬಹುಮುಖ ವ್ಯಕ್ತಿತ್ವ. ಅವರು ವೃತ್ತಿಯಲ್ಲಿ ನ್ಯಾಯವಾದಿ ಆಗಿ ಪ್ರವೃತ್ತಿಯಲ್ಲಿ ವಚನ ಸಾಹಿತ್ಯ ಸಂಶೋಧಕರಾಗಿ ಮಾಡಿದ ಜನಮುಖಿ ಕಾರ್ಯ ಅಪೂರ್ವವಾದುದು. ಅವರು ನಿಜ ಅರ್ಥದಲ್ಲಿ**



**ಸಂಸ್ಕೃತಿಯ ಪರಿಚಾರಕರಾಗಿದ್ದರು. ಹಳಕಟ್ಟಿಯವರ ಬದುಕು ಸಾಧನೆ ನಾಡಿಗೆ ಮಾದರಿಯಾಗಿದೆ ಎಂದು ಪ್ರಾಧ್ಯಾಪಕ ಡಾ.ಪಿ.ಕೆ. ರಾಠೋಡ್ ಅವರು ಅಭಿಪ್ರಾಯಪಟ್ಟಿದ್ದಾರೆ.**

**ಅವರು ಇತ್ತೀಚೆಗೆ ಮುಂಬಯಿ ವಿವಿ ಕನ್ನಡ ವಿಭಾಗ ಆಯೋಜಿಸಿದ್ದ ವಚನ ಪಿತಾಮಹ ಪ.ಗು.ಹಳಕಟ್ಟಿ ವಿಶೇಷ ಸಂಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ೩೫ ವರ್ಷಗಳ ಕಾಲ ಶಿವಾನುಭವ ಪತ್ರಿಕೆಯನ್ನು, ೨೫ ವರ್ಷಗಳ ಕಾಲ ನವ ಕರ್ನಾಟಕ ಪತ್ರಿಕೆಯನ್ನು ಮುನ್ನಡೆಸಿ ಮಧ್ಯಕಾಲೀನ ಕನ್ನಡ ಸಾಹಿತ್ಯವನ್ನು ಲೋಕಮುಖಕ್ಕೆ ಪರಿಚಯಿಸಿದರು. ಇವತ್ತು ವಚನ ಸಾಹಿತ್ಯ ಜನರ ಮನೆಮನೆಗೆ ತಲುಪುವಂತಾದುದು ಹಳಕಟ್ಟಿಯವರ ಶ್ರಮದಿಂದ. ಹಳಕಟ್ಟಿಯವರ ಪತ್ರಿಕಾ ಸಾಹಿತ್ಯ ೨೦,೦೦೦ ಪುಟಗಳಷ್ಟು ವ್ಯಾಪ್ತಿಯನ್ನು ಒಳಗೊಂಡಿದೆ. ಹಳಕಟ್ಟಿಯವರ ಕನ್ನಡ ಕಾರ್ಯ ಯಾವತ್ತೂ ಸ್ಮರಣೀಯ ಎಂದು ಅಭಿಪ್ರಾಯಪಟ್ಟರು.**

**ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕನ್ನಡ ವಿಭಾಗದ ಮುಖ್ಯಸ್ಥರು ಡಾ.ಜಿ.ಎನ್. ಉಪಾಧ್ಯ ಮಾತನಾಡುತ್ತಾ, ಹಳಕಟ್ಟಿಯವರ ಕನ್ನಡ ಪ್ರೇಮ,**

**(ಪುಟ 12ಕ್ಕೆ)**

# NITYA POOJA DETAILS FROM 01.02.2017 TO 28.02.2017

| Name | Day | Date of Pooja | Gotra | Nakshatra |
|---|---|---|---|---|
| Master Arnav Amit Gaonkar | Tuesday | February 2, 2017 | | |
| Rajesh Rao | Friday | February 5, 2017 | Vashista | Moola |
| Late G.R. Anand<br>S.T. Arasu<br>Bhaskar Bhatt | Monday | February 8, 2017 | 1. Badrayana<br>2. Shiva perumal<br>3. Bharadwaj | 1. Aaridra<br>2. Poorvashada<br>3. Hasta |
| Chetan Prasad | Thursday | February 11, 2017 | Bharadwaj | Mrigashira |
| Sri. Sevak | Tuesday | February 16, 2017 | | |
| Hemant Doreswamy<br>Late Sitalaxmi | Wednesday | February 17, 2017 | Kashyap<br>Koundinya | |
| Pratap Jaywantrao Varde | Thursday | February 18, 2017 | Vatsa | Shatatarka |

# ಚಿಂತಕ ಗೋಪಾಲ ಬಿ. ಶೆಟ್ಟಿಯವರ ಹೊಸ ಕೃತಿ 'ಮಿಥ್ಯೆಯೊಳಗಿನ ಸತ್ಯ'

ಲೇಖಕ ಗೋಪಾಲ ಬಿ. ಶೆಟ್ಟಿ ಇಂದ್ರಾಳಿ ಇವರ ಸಂಪಾದಕತ್ವದಲ್ಲಿ ಅವರ ಮತ್ತು ವಿವಿಧ ಮೂಲಗಳಿಂದ ಆಯ್ದ ವೈಚಾರಿಕ ಹಾಗೂ ಇತರ ಬರಹಗಳಿಂದ ಈ ಕೃತಿ ಮೂಡಿಬಂದಿದೆ. ಸಾಕಷ್ಟು ಕನ್ನಡ ಮತ್ತು ಆಂಗ್ಲ ಕೃತಿಗಳನ್ನು ಶೆಟ್ಟಿಯವರು ಈ ಕೃತಿ ರಚಿಸುವಲ್ಲಿ ಹಿನ್ನೆಲೆಯಾಗಿ ಓದಿಕೊಂಡಿದ್ದಾರೆ.

ಈ ಮೊದಲು ನಾನು ಶೆಟ್ಟಿಯವರ 'ಅಂತರಂಗ ಮತ್ತು ಬಹಿರಂಗ', 'ಅನಾವರಣ' ಮೊದಲಾದ ಕೃತಿಗಳನ್ನು ಓದಿಕೊಂಡಿದ್ದೇನೆ. ಅವರು ತಮ್ಮ ಕೃತಿಗಳಲ್ಲಿ ನಾವು ಬಾಳುತ್ತಿರುವ ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿರುವ ಸಾಮಾಜಿಕ ಅನ್ಯಾಯಗಳ ಅಸಮತೆಗಳ ಬಗ್ಗೆ ವಿಷಾದದಿಂದ, ಅಷ್ಟೇ ದಿಟ್ಟತನದಿಂದ ಅವುಗಳ ಬಗ್ಗೆ ಪ್ರಶ್ನೆ ಮಾಡುತ್ತಾರೆ. ಅವರ ಹೆಚ್ಚಿನ ಕೃತಿಗಳಂತೆ ಈ ಕೃತಿಗೂ ಮುನ್ನುಡಿಯಾಗಲಿ ಬೆನ್ನುಡಿಯಲಾಗಲಿ ಇಲ್ಲದಿರುವುದು ಅವರ ತನ್ನದೇ ಆದ ನಿಲುವಿಗೆ, ಚಿಂತನೆಗೆ ಸಾಕ್ಷಿಯಾಗುತ್ತದೆ. ಈ ಕೃತಿಯೂ ಅವರೇ ಹುಟ್ಟುಹಾಕಿದ ಅವರದೇ ಆದ ನೂತನ ಪಬ್ಲಿಕೇಷನ್‌ನಲ್ಲಿ ಪ್ರಕಟಗೊಂಡಿದೆ. ಕೃತಿಕಾರರ ವಿಭಿನ್ನ ವಿಚಾರಧಾರೆಗೆ ಒಪ್ಪುವಂತಹ ಮುಖಪುಟವನ್ನು ಸತೀಶ್ ಕಲ್ಮಾಡಿಯವರು ರಚಿಸಿದ್ದಾರೆ. ನಮ್ಮ ಸಮಾಜದಲ್ಲಿ ಹರಡಿರುವ ಮಿಥ್ಯೆಯನ್ನು ಜ್ಞಾನ ಜ್ಯೋತಿಯ ಮೂಲಕ ಹೊಡೆದೋಡಿಸುವ ಸ್ತುತ್ಯ ಕಾರ್ಯವನ್ನು ಲೇಖಕರು ಇಲ್ಲಿ ಮಾಡಿತೋರಿಸಿದ್ದಾರೆ.

ಕಥಾ ಸಂಕಲನ, ಕಾವ್ಯ ಸಂಕಲನ, ಗೀತಾ ನಾಟಕ ಅಲ್ಲದೆ, ವೈಚಾರಿಕ ಕೃತಿಗಳನ್ನೂ ಹೊರತಂದಿರುವ ಶೆಟ್ಟಿಯವರದು ಇದು ಹನ್ನೆರಡನೆಯ ಕೃತಿ. ಇವರ ವೈಚಾರಿಕ ಕೃತಿಗಳಲ್ಲಿ ಓರ್ವ ವಿಚಾರವಾದಿಯ ವಿಮರ್ಶಾತ್ಮಕ ದೃಷ್ಟಿಕೋನದ, ಸಮಾಜವಾದಿ ನಿಲುವಿನ ವಿಚಾರಧಾರೆಯನ್ನು ಕಾಣಬಹುದಾಗಿದೆ.

ಸದಾ ವ್ಯಾಸಂಗ ನಿರತರಾಗಿರುವ ಶೆಟ್ಟಿಯವರು ವಿಚಾರವಾದಿ ಲೇಖಕರಾಗಿ ಶೋಷಿತರ, ದಲಿತರ ಮೇಲಾಗುವ ಅನ್ಯಾಯ, ದೌರ್ಜನ್ಯದ ವಿರುದ್ಧ ದನಿಯೆತ್ತುತ್ತಾರೆ. 'ವಾರ್ತಾಭಾರತಿ' ಪತ್ರಿಕೆಯ ಅಂಕಣ ಬರಹಗಾರರಾಗಿ, ಲೇಖಕರಾಗಿ ಇವರು ಪ್ರಸಿದ್ಧರು. ಮೂಢನಂಬಿಕೆ, ಡಂಭಾಚಾರವನ್ನು ಇವರು ಕಟುವಾಗಿ ವಿರೋಧಿಸುತ್ತಾ ಬಂದವರು.

ಪ್ರಸ್ತುತ ಈ ಕೃತಿಯಲ್ಲಿ ಲೇಖಕರು 36 ಅಧ್ಯಾಯಗಳಲ್ಲಿ 200 ಪುಟಗಳಲ್ಲಿ ವಿಚಾರವಾದದ ಧಾರೆಯನ್ನೇ ಹರಿಸಿದ್ದಾರೆ. ಇವರ ಸಂಪಾದಕತ್ವದಲ್ಲಿ ಮೂಡಿಬಂದಿರುವ ಈ ಕೃತಿಯಲ್ಲಿ ಇವರ ಲೇಖನದ ಜೊತೆಜೊತೆಗೆ ಇತರ ಪ್ರಸಿದ್ಧ ಲೇಖಕರ ಬರಹಗಳನ್ನು ಆರಿಸಿಕೊಂಡಿದ್ದಾರೆ.

ಕೃತಿಯ ಮೊದಲ ಲೇಖನವೇ ವಿಚಾರವಾದದ ವಿಹಂಗಮ ನೋಟ. ಈ ಲೇಖನದಲ್ಲಿ ಖ್ಯಾತ ವಿಚಾರವಾದಿ ಆರ್.ಜಿ. ಇಂಗರ್ ಸೋಲ್ ಇಂಗ್ಲಿಷ್ ಕವಿ ಪಿ.ಬಿ. ಶೆಟ್ಲಿ, ಆಲ್ಬರ್ಟ್ ಐನ್‌ಸ್ಟೀನ್, ಭಗತ್ ಸಿಂಗ್, ಸ್ವಾಮಿ ವಿವೇಕಾನಂದ, ರಾಷ್ಟ್ರಕವಿ ಕುವೆಂಪು, ಡಾ. ನರೇಂದ್ರ ದಾಭೋಲ್ಕರ್ ಮೊದಲಾದ ಮಹಾಚೇತನಗಳ ಅಣಿಮುತ್ತುಗಳಿವೆ ಇವೆಲ್ಲವೂ ಅಂಧಶ್ರದ್ಧೆ ಅಜ್ಞಾನದಿಂದ ಕೂಡಿದ ಮತಾಂಧತೆ ವಿರುದ್ಧ ಹುಟ್ಟಿಕೊಂಡಿರುವಂತಹುಗಳು.

ಎರಡನೆಯ ಲೇಖನ ಫಾಸಿಸ್ಟ್ ನರಹಂತಕರ ಗುಂಡಿಗೆ ಬಲಿಯಾದ ಖ್ಯಾತ ವಿಚಾರವಾದಿ ಡಾ. ನರೇಂದ್ರ ದಾಭೋಲ್ಕರ್ ಅವರ ವಿಚಾರಧಾರೆ. ಅಲ್ಲದೆ, ಅವರ ಹತ್ಯೆ ಮಾಡಿದವರನ್ನು ಸರಕಾರ ಇನ್ನೂ ಸೆರೆಹಿಡಿಯದ ಬಗ್ಗೆ ಖೇದ ವ್ಯಕ್ತಪಡಿಸುತ್ತಾರೆ. ಲೇಖನ ಬರೆದವರು ಡಾ. ಜಿ. ಭಾಸ್ಕರ್ ಮಯ್ಯನವರು.

'ಇಂದಿರಾ ಶೈಲಿ ನೆನಪಿಸುವ ಮೋದಿ ಆಡಳಿತ' ಲೇಖನದಲ್ಲಿ ಇಂದಿರಾ ಗಾಂಧಿಯವರ ಆಡಳಿತ ಕ್ರಮ ಅಲ್ಲದೆ ಮೋದಿ ಮತ್ತು ಇಂದಿರಾ ಇವರಿಬ್ಬರಲ್ಲೂ ಕಾಣುವ ನಿರಂಕುಶ ಸ್ವಭಾವ ಹಾಗೂ ಆರಾಧನಾ ಭಾವ ಆಕಾಂಕ್ಷೆಯ ಸಾಮ್ಯತೆಯನ್ನು ಕಂಡುಕೊಂಡಿದ್ದಾರೆ. ಪ್ರಜಾವಾಣಿ ಪ್ರಕಟಿತ ಈ ಲೇಖನ ಬರೆದವರು ರಾಮಚಂದ್ರ ಗುಹಾ ಅವರು.

ಪ್ರಜಾವಾಣಿಯಲ್ಲಿ ಪ್ರಕಟಗೊಂಡಿರುವ ಡಾ. ಪಂಡಿತಾರಾಧ್ಯರ ಗೋಹತ್ಯಾ ನಿಷೇಧ ಹಾಗೂ ಸಾವರ್ಕರ್ ಹೆಸರಿನ ಲೇಖನವೂ ಈ ಕೃತಿಯಲ್ಲಿ ಗೋರಕ್ಷಣೆಯ ಹುಚ್ಚುತನದಂತೆ ಧಾರ್ಮಿಕ ನಂಬಿಕೆಯ ಗೋ ಭಕ್ಷಣೆ ಕ್ರೌರ್ಯವನ್ನು ಸಾವರ್ಕರ್ ವಿರೋಧಿಸಿದ್ದಾರೆ.

ಗಣೇಶ್ ಅಮೀನ್ ಗಡಿ ಅವರ ನಾಸ್ತಿಕರನ್ನು ಹೊರಗಿಟ್ಟ ಸಾಂಸ್ಕೃತಿಕ ಜೀವನ ಬರಡು ಲೇಖನವೂ ಈ ಕೃತಿಯಲ್ಲಿದೆ. ವಾಸ್ತು, ಜ್ಯೋತಿಷ್ಯ ಇವೆಲ್ಲ ನಮ್ಮ ಸಂಪ್ರದಾಯಗಳು. ಇವು ಸಂಪ್ರದಾಯಗಳಾಗಿ ಬೆಳೆದುಬಂದ ಬಗ್ಗೆ ಅಭ್ಯಾಸ ಮಾಡಬಹುದಾಗಿದೆಯಾದರೂ ವಿಜ್ಞಾನವೆಂದು ಕಲಿಸುವುದು ಸರಿಯಲ್ಲವೆಂದು ಅವರು ಚರ್ಚಿಸುತ್ತಾರೆ.

ಕೃತಿಯ ಸಂಪಾದಕ ಗೋಪಾಲ ಬಿ. ಶೆಟ್ಟಿಯವರು ಇದಕ್ಕೆ ಅವರು ಸಿದ್ಧರಿದ್ದಾರೆಯೇ ಎಂಬ ಲೇಖನವೂ ಈ ಕೃತಿಯಲ್ಲಿದೆ. ವಿ.ಕೆ. ರಾಮಾನುಜನ್ ಅವರು ಬರೆದಿರುವ ಇಂಗ್ಲಿಷ್ ಪ್ರಬಂಧ ಶ್ರೀ ಹಂಡ್ರೆಡ್ ರಾಮಾಯಣಮ್ ಬಗ್ಗೆ ನಡೆದ ಚರ್ಚೆಯೂ ಇಲ್ಲಿ ಬಂದಿದೆ.

'ಮಡೆಸ್ನಾನ' ಮತ್ತು 'ಪಂಕ್ತಿಭೇದ' ಅವರದ್ದೇ ಆದ ಇನ್ನೊಂದು ವಿಚಾರಪೂರ್ಣ ಲೇಖನ.

ವಾರ್ತಾಭಾರತಿ ವಾಚಕರವಾಣಿಗೆ ಒಂದು ಪತ್ರ ಈ 'ಆಷಾಢಭೂತಿತನಕೆ ಕೊನೆ ಎಂದು' ಲೇಖನದಲ್ಲಿ ಶೆಟ್ಟಿಯವರು ಸಂಪಾದಕೀಯ ಲೇಖನಗಳ ಬಗ್ಗೆ ಚರ್ಚೆ ನಡೆಸಿದ್ದಾರೆ.

ಪ್ರಸ್ತುತ ಮಾಸಪತ್ರಿಕೆಯಲ್ಲಿ ಪ್ರಕಟವಾಗಿರುವ ಸ್ವಾತಂತ್ರ್ಯ ಪರಿಕಲ್ಪನೆ 'ನಾನು ಕಂಡಂತೆ' ಲೇಖನದಲ್ಲಿ ಶೆಟ್ಟಿಯವರು ಸ್ವಾತಂತ್ರ್ಯ ಪರಿಕಲ್ಪನೆಯ ಬಗ್ಗೆ ಅತ್ಯಂತ ಮಾರ್ಮಿಕವಾಗಿ ಚರ್ಚಿಸಿದ್ದಾರೆ. ಲೇಖನ ಓದಿಸಿಕೊಂಡು ಹೋಗುತ್ತೆ.

ವಾರ್ತಾಭಾರತಿ ಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಈ ಕೃತಿಯಲ್ಲಿ ಪ್ರಕಟವಾಗಿರುವ ಅವರ ಮತ್ತೊಂದು ಲೇಖನ ಕಮಲಾದಾಸ್‌ಗೆ ಕೊನೆಯ ನಮನ. ಬಹುಮುಖ ಪ್ರತಿಭೆಯ ಬರಹಗಾರ್ತಿಯಾಗಿರುವ ಇವರು ಮಲಯಾಳಂ ಮತ್ತು ಇಂಗ್ಲಿಷಿನಲ್ಲಿ ಬರೆದು ಜನಮನ ಸೂರೆಗೊಂಡ ಕಮಲಾದಾಸ್ ಕಮಲಾ ಸೂರೈಯಾ ಅವರ ಸಿದ್ಧಿ ಸಾಧನೆಯ ಚಿತ್ರಣ ಇಲ್ಲಿದೆ.

ಬಸವಣ್ಣನವರ ವಚನಗಳಲ್ಲಿ ವೈಚಾರಿಕ ನಿಲುವು ಗೋಪಾಲ ಬಿ. ಶೆಟ್ಟಿಯವರ ಇನ್ನೊಂದು ಲೇಖನ.

ಆ ಸತ್ಯ ಹರಿಶ್ಚಂದ್ರ ಗೌರೀಶ ಕಾಯ್ಕಿಣಿಯವರು ಕಸ್ತೂರಿಯಲ್ಲಿ ಬರೆದಿರುವ ಲೇಖನ. ಈ ಲೇಖನ ಸತ್ಯ ಹರಿಶ್ಚಂದ್ರನ ಇನ್ನೊಂದು ಮುಖವನ್ನು ನಮ್ಮೆದುರು ತಂದು ನಿಲ್ಲಿಸುತ್ತದೆ.

ಹೊಸತು ಪತ್ರಿಕೆಯಲ್ಲಿ ಬಂದಿರುವ ಜಿ. ರಾಮಕೃಷ್ಣ ಅವರ ಋಗ್ವೇದ ಪ್ರವೇಶಿಕೆ ಐತಿಹ್ಯ ಮತ್ತು ವಾಸ್ತವದಲ್ಲಿ ಋಗ್ವೇದ ಕಾಲದ ಧರ್ಮಶಾಸ್ತ್ರ ಪ್ರಶ್ನೋತ್ತರಗಳ ಚರ್ಚೆಯೂ ಇಲ್ಲಿ ಮೂಡಿಬಂದಿದೆ.

'ಎದ್ದೇಳು ಕೃಷ್ಣ' ಶೆಟ್ಟಿಯವರ ಕತ್ತಲು ಕವಿದಾಗ ಕವನ ಸಂಕಲನದಿಂದ ಆಯ್ದ ಒಂದು ಕವನ. ಸ್ವರ್ಣ ರಥದಲ್ಲಿ ಕುಳಿತುಕೊಂಡು ಬರುವ ವಜ್ರ ಕಿರೀಟಧಾರಿ ಕೃಷ್ಣನನ್ನು ದರುಶನ ನೀಡೆಂದು ಕವಿ ಕೇಳಿಕೊಳ್ಳುತ್ತಾರೆ.

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರಹಗಳ ಮತ್ತು ಭಾಷಣಗಳ ಸಂಪುಟದಿಂದ ಆಯ್ದ 'ಕೃಷ್ಣಾವಸಾನದ ಕಥೆ'ಯೂ ಈ ಸಂಕಲನದಲ್ಲಿದೆ.

ವಾರ್ತಾಭಾರತಿಯಲ್ಲಿ ಪ್ರಕಟಿತ ಗುಜರಾತ್ ಸರಕಾರದ ನಿವೃತ್ತ ಡಿ.ಜಿ.ಪಿ.ಆರ್.ಬಿ. ಶ್ರೀ ಕುಮಾರ್ ಮಲಯಾಳಂದಲ್ಲಿ ಬರೆದ ಕೃತಿಯನ್ನು ಡಾ. ಸಾರಾ ಅಬೂಬಕ್ಕರ್ 'ಧರ್ಮ' ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಕೃತಿ ಮತ್ತು ಅದು

✍ ಡಾ. ಕರುಣಾಕರ್ ಎನ್. ಶೆಟ್ಟಿ ಪಣಿಯೂರ್

ಮೂಡಿಬಂದ ಹಿನ್ನೆಲೆಯನ್ನು ಶೆಟ್ಟಿಯವರಿಲ್ಲಿ ಮನಮುಟ್ಟುವಂತೆ ಚಿತ್ರಿಸಿದ್ದಾರೆ.

'ಋಷಿ - ಖುಷಿ' ಲೇಖನದಲ್ಲಿ ನಮ್ಮ ಪೂರ್ವಜರು ಉಚ್ಛ ಕುಲದಲ್ಲಿ ಹುಟ್ಟಿ ಬಂದವರೆಂದು ನಾವು ತಿಳಿದರೆ ಅದು ತಪ್ಪು ಕಲ್ಪನೆ. ಆ ಹಿರಿಯರ ಮೂಲವನ್ನು ಕೆದಕಿದರೆ ಮಿಥ್ಯೆಯೊಳಗಿನ ಸತ್ಯ ತಿಳಿದುಬರುತ್ತದೆ ಎಂದು ಬರೆಯುತ್ತಾರೆ. ಬಹುಶಃ ಈ ಕೃತಿಗೂ ಅವರಿಗೆ ಇಲ್ಲಿಂದಲೇ ಹೆಸರು ಹೊಳೆದಿರಬೇಕು. ಈ ಲೇಖನವನ್ನು ಬರೆದವರು ಪ್ರೊ. ಬಿಪಿ ವೀರಭದ್ರಪ್ಪ. ಪ್ರಜಾವಾಣಿಯಲ್ಲಿ ಈ ಲೇಖನ ಪ್ರಕಟವಾಗಿತ್ತು.

ಜನಾಂಗೀಯ ರಾಜಕಾರಣದ ಹರಿಕಾರ ಬಾಳಾಠಾಕ್ರೆ ಮೂಲ ಇಂಗ್ಲಿಷ್‌ನ ಖ್ಯಾತ ಪತ್ರಕರ್ತ ಮೀನಾ ಮೆನನ್ ಬರೆದಿರುವ ಲೇಖನದ ಆಯ್ದ ಭಾಗಗಳ ಸರಳಾನುವಾದ. ಅದನ್ನು ಅಚ್ಚುಕಟ್ಟಾಗಿ ಶೆಟ್ಟಿಯವರು ಮಾಡಿದ್ದಾರೆ.

ವಾರ್ತಾಭಾರತಿ ಪತ್ರಿಕೆಯಲ್ಲಿ ಪ್ರಕಟಿತ ಶಿವಸುಂದರ ಅವರ ಮಸೀದಿಯಲ್ಲಿಲ್ಲದ ರಾಮ ರಾಮ ಮಂದಿರದಲ್ಲೂ ಇರುವುದಿಲ್ಲ ಲೇಖನದಲ್ಲಿ ಜನರ ಮುಗ್ಧ ಧಾರ್ಮಿಕ ನಂಬಿಕೆಗಳನ್ನು ಬಳಸಿಕೊಂಡು ದ್ವೇಷದ ರಾಜಕಾರಣ ಮಾಡಿ ಮತ್ತೆ ಸಮಾಜವನ್ನು ಹಿಡಿತಕ್ಕೆ ತೆಗೆದುಕೊಳ್ಳುವ ರಾಜಕಾರಣಿಗಳ ಷಡ್ಯಂತ್ರದ ಬಗ್ಗೆ ತಿಳಿಸುತ್ತಾರೆ.

ಪ್ರೊ. ಕೆ. ಎಸ್. ಭಗವಾನ್ ಅವರ ಆಹಾರ ಮತಾಚಾರ ಲೇಖನ ಶ್ರೀಕೃಷ್ಣ ದೇವಸ್ಥಾನ ಯಾರಿಗೆ ಸೇರಿದ್ದು ಲೇಕನ ಈ ದೇವಸ್ಥಾನ ಯಾರಿಗೆ ಸೇರಿದೆಯೆಂಬ ವಿಷಯದ ಮೇಲೆ ಬೆಳಕು ಬೀರಿದೆ.

ಪ್ರೊ. ಚಂದ್ರಶೇಖರ ಪಾಟೀಲ ಅವರ ವಾರ್ತಾಭಾರತಿಯಲ್ಲಿ ಪ್ರಕಟಿತ 'ಗಾಂಧೀವಾದ ಮತ್ತು ಗಾಂಧಿಗಳು' ತನ್ನೆಲ್ಲ ವೈರುಧ್ಯಗಳ ಮಧ್ಯೆ ಗಾಂಧಿ - ಮೋಹನದಾಸ್ ಕರಮಚಂದ ಗಾಂಧಿ ಒಬ್ಬ ಮಾನವನಾಗಿದ್ದ ಎನ್ನುವ ಸತ್ಯವನ್ನು ಬಿಚ್ಚಿ ತೋರಿಸುವ ಲೇಖನ.

ಈತ ಶ್ರೀ ಸತ್ಯನಾರಾಯಣ ಲೇಖನ ಭಾರತಿ ಹಾವನೂರ ಅವರ ಪ್ರಜಾವಾಣಿಯಲ್ಲಿ ಪ್ರಕಟಿತ ಲೇಖನ ಇಂದು ಜನರು ಅತ್ಯಂತ ಭಕ್ತಿಭಾವದಿಂದ ಮಾಡುವ ಶ್ರೀ ಸತ್ಯನಾರಾಯಣ ಪೂಜೆ ಹೇಗೆ ಯಾವಾಗ ಹುಟ್ಟಿಕೊಂಡಿತೆಂಬ ಹಿನ್ನಲೆಯನ್ನು ತೆರೆದಿಡುವ ಲೇಖನ.

ಗೋಹತ್ಯ ಸುಪ್ರೀಂಕೋರ್ಟ್ ಮತ್ತು ಸಂವಿಧಾನ ಶಿವಸುದರ್ ಅವರ ಪ್ರಸ್ತುತ ಪಾಕ್ಷಿಕದಲ್ಲಿ ಪ್ರಕಟಿತ ಲೇಖನ ಇಲ್ಲಿ ಹೋಹತ್ಯೆಯ ಬಗ್ಗೆ ನಡೆದಿರುವ ಚರ್ಚೆ ಗಮನಾರ್ಹವಾಗಿದೆ.

ಪ್ರೊ. ಜಿ.ಎಚ್. ನಾಯಕ್ ಅವರ ಪ್ರಜಾವಾಣಿಯಲ್ಲಿ ಪ್ರಕಟಿತ 'ನಾವು ಕಾಣದ ರಾಧಾಕೃಷ್ಣನ್ ಮುಖ' ಲೇಖನದಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನ 05-09-1888 ಅಲ್ಲ ಅದು 20-09-1887 ಎಂದು ಅವರ ಮಗ ಡಾ. ಸರ್ವಪಲ್ಲಿ ಗೋಪಾಲ ಅವರು ಬರೆದಿರುವುದನ್ನು ಉಲ್ಲೇಖಿಸುತ್ತ, ನಾವು ಶಿಕ್ಷಕರ ದಿನವನ್ನು 5 ರಂದೇ ಮುಂದುವರಿಸುವುದು ಸರಿಯೇ ಎಂದು ಪ್ರಶ್ನೆ ಎಸೆಯುತ್ತಾರೆ.

ಪ್ರಜಾವಾಣಿ ಪ್ರಕಟಿತ ರಾಮಚಂದ್ರ ಗುಹಾ ಅವರ ಧಾರ್ಮಿಕ ನಂಬಿಕೆ ದಿವ್ಯಾನುಭೂತಿ, ಪೈಶಾಚಿಕತೆ ಈ ಲೇಖನ ಧಾರ್ಮಿಕ ನಂಬಿಕೆ ಜ್ಯೋತಿಷ್ಯದ ಮೇಲೆ ಬೆಳಕುಚೆಲ್ಲುತ್ತದೆ.

ಹಿಂದೂ ಧರ್ಮ ಶಾಸ್ತ್ರದ ಒಗಟುಗಳು ವಾರ್ತಾಭಾರತಿಯಲ್ಲಿ ಪ್ರಕಟಗೊಂಡಿರುವ ಶೆಟ್ಟಿಯವರ ಬೇರೆ ಬೇರೆ ಲೇಖನಗಳು. ಇಲ್ಲಿ ಅವರು ವಿವಿಧ ಸಂಹಿತೆಗಳ ಬಗ್ಗೆ ಚರ್ಚೆ ನಡೆಸಿದ್ದಾರೆ.

ಮಂಗಳವಾದವನ್ನು ಅಮಂಗಳ ಎಂದವರಾರು ಲೇಖನದ ಪ್ರವೀಣ್ ಎಸ್. ಶೆಟ್ಟಿ ಮಂಗಳೂರು ಇವರು ಪತ್ರಪುಷ್ಪಕ್ಕೆಂದು ಬರೆದಿರುವ ವಿಚಾರಾತ್ಮಕ ಲೇಖನ.

ಪದ್ಮರಾಜ ದಂಡಾವತಿ ಅವರು ಪ್ರಜಾವಾಣಿಗಾಗಿ ಬರೆದಿರುವ ಈ ಲೇಖನದಲ್ಲಿ ಜಯಲಲಿತಾ ಮತ್ತು ತಮಿಳುನಾಡಿನ ರಾಜಕೀಯ ವಿಡಂಭನೆಯ ಚಿತ್ರಣವಿದೆ.

ಜ್ಯೋತಿಷ್ಯ ಕೇವಲ ಬಂಕಮ್ ಎ. ಎಸ್. ನಟರಾಜ್ ಅವರು ಬರೆದಿರುವ ಜ್ಯೋತಿಷ್ಯಕ್ಕೆ ಸವಾಲು ಕೃತಿಯಿಂದ ತೆಗೆದುಕೊಳ್ಳಲಾಗಿದೆ.

ವಾಸ್ತು ಎಷ್ಟು ವಾಸ್ತವ ಪ್ರೊ. ಬಿ.ವಿ. ವೀರಭದ್ರಪ್ಪ ಇವರು ಬರೆದಿರುವ ವೈಚಾರಿಕ ಒಳನೋಟದ ಅಪರೂಪದ ಕೃತಿಯ ಸ್ಥೂಲ ಪರಿಚಯಾತ್ಮಕ ಲೇಖನವಾಗಿದೆ.

ವಿಚಾರವಾದದ ಬಗ್ಗೆ ಒಂದಿಷ್ಟು ರಂತಿದೇವನ ಯಜ್ಞಶಾಲೆಯಲ್ಲಿ, ಸತ್ಯ - ಪೀಠ ಸತ್ಯನಾರಾಯಣನಾದ ಕಥೆ, 'ಭಗವದ್ಗೀತೆ ಒಂದು ಅದ್ಭುತ ಪ್ರಕ್ಷೇಪ' ಇವು ಈ ಕೃತಿಯ ಸಂಪಾದಕರಾದ ಗೋಪಾಲ ಬಿ. ಶೆಟ್ಟಿಯವರ ಲೇಖನಗಳು.

ಸತ್ಯದ ಪ್ರಭೆಯನ್ನು ಮಿಥ್ಯೆಯ ಅವಕುಂಠನದಿಂದ ಅನವರತ ಅದುಮಿ ಹಿಡಿಯುವುದು ಅಸಾಧ್ಯ. ಕಾಗದದ ಹೂವಿನಲ್ಲಿ ಕಮನೀಯ ಕಂಪು ಹೊರಸೂಸುವುದು ಕೂಡಾ ಅಷ್ಟೇ ಅಸಾಧ್ಯವೆಂದು ಕೃತಿಯ ಕೊನೆಯಲ್ಲಿ ಹೇಳಿರುವ ಶೆಟ್ಟಿಯವರ ಎಲ್ಲ ವೈಚಾರಿಕ ಕೃತಿಗಳಂತೆ ಈ ಕೃತಿಯಲ್ಲಿ ಬರುವ ಅವರ ಮತ್ತು ಇತರ ಲೇಖಕರ ಲೇಖನಗಳು ನಮ್ಮ ದೇಶದ ರಾಜಕೀಯ, ಧಾರ್ಮಿಕ ಅವ್ಯವಸ್ಥೆ, ಸಾಮಾಜಿಕ ಅನ್ಯಾಯಗಳ ಮೇಲೆ ಕ್ಷಕಿರಣ ಬೀರಿವೆ. ನಿಜವಾಗಿಯೂ ಯಾವ ಧರ್ಮವೂ ಕೆಟ್ಟದ್ದನ್ನು ಭೋದಿಸುವುದಿಲ್ಲ. ಆದರೆ, ಅದಕ್ಕೆ ನಂತರದ ದಿನಗಳಲ್ಲಿ ರೆಕ್ಕೆಪುಕ್ಕಗಳನ್ನು ಅನುಯಾಯಿಗಳು ತಾಗಿಸುತ್ತಾರೆ. ಎಲ್ಲ ಧರ್ಮದಲ್ಲೂ ತನ್ನ ಇತಿಮಿತಿ, ವಿಧಿ ನಿಷೇದ ಇದ್ದ ಇರುತ್ತದೆ. ಒಳ್ಳೆಯದು ಇದ್ದಲ್ಲಿ ಕೆಟ್ಟದ್ದು ಇರಬೇಕಾದ್ದೇ. ಇಲ್ಲದಿದ್ದರೆ ಒಳ್ಳೆಯದರ ಬೆಲೆ ಅರಿವಾಗುವುದಾದರೂ ಹೇಗೆ? ನಾವು ನೇರ ಮಾರ್ಗದಲ್ಲಿ ನಡೆದು ಇತರರಿಗೆ ದಾರಿದೀಪದ ಕಾರ್ಯವೆಸಗಬಹುದು. ಅನ್ಯಾಯ ನಡೆದಾಗ ಪ್ರತಿಭಟಿಸಬೇಕೇ ಹೊರತು ಎಲ್ಲವೂ ತಪ್ಪೆನ್ನಲಾಗದು. ನಾವು ಪ್ರಾಮಾಣಿಕರಾಗಿ ಬದುಕುತ್ತಾ ಇತರರಿಗೆ ಮಾದರಿಯಾಗೋಣ. ಈ ಕೃತಿಯನ್ನು ಹೊರತಂದಿರುವ ಲೇಖಕರಿಗೆ ಮತ್ತೊಮ್ಮೆ ಮಗದೊಮ್ಮೆ ಅಭಿನಂದನೆಗಳು.

## ಪ್ರಿಯೆ

ಪ್ರೀತಿಸಿದಾಗ...
ಪ್ರಿಯೆಯ ಕಂಗಳಿಂದ
ಒಲವಿನ ಜೇನಿನ
ಧಾರೆ-ಧಾರೆ!
ಕೋಪಿಸಿದಾಗ...
ಪ್ರಿಯೆಯ ಕಂಗಳಿಂದ ಜ್ವಾಲಾಮುಖಿಯ
ಧಾರೆ-ಧಾರೆ !

***

## ದುರಂತ

ಅಪ್ಪ ಬದುಕಿದ್ದಾಗ...
ಉಪವಾಸ ಹಾಕಿದ
ಮಕ್ಕಳು..
ಸತ್ತಾಗ
ಊರ ಜನರಿಗೆ
ಬಡಿಸಿದರು
ಮೃಷ್ಟಾನ್ನ ಭೋಜನ!

*- ಶೋಭಾ ಪ್ರಮೋದ್*

## SAD DEMISE

With deep regret we inform one and all about the sad demise of our member Shri. Balasubramanya. We send our sincere condolences to his immediate family and friends, and pray to the almighty to give all strength to bear the loss with courage and fortitude.

# ಕ್ಯಾನ್ಸರ್ ಎಂಬ ಮಾರಕ ರೋಗ

ಕ್ಯಾನ್ಸರ್ ವೈದ್ಯಕೀಯ ಪದಗಳಲ್ಲಿ Malignancy ಎಂದು ಕರೆಯುತ್ತಾರೆ. ಇದನ್ನು ಅರ್ಬುದ ರೋಗ ಎಂದೂ ಕರೆಯಲಾಗುತ್ತದೆ. ಇದರಲ್ಲಿ ಕೋಶಗಳ ಒಂದು ಸಮೂಹವು ಅನಿಯಂತ್ರಿತ ಬೆಳವಣಿಗೆಯನ್ನು ತೋರಿಸುತ್ತವೆ. ಅಂದರೆ ಸಾಮಾನ್ಯಕ್ಕಿಂತಲೂ ಮಿತಿ ಮೀರಿದ ಕೋಶಗಳ ವಿಭಜನೆ ಅಂಗಾಂಶಗಳ ಮೇಲೆ ದುರಾಕ್ರಮಣ. ಶರೀರದ ಒಂದು ಭಾಗದಲ್ಲಿ ಇದು ಕಾಣಿಸಿಕೊಂಡರೆ ಅಕ್ಕ ಪಕ್ಕದ ಕೋಶಗಳನ್ನು ನಾಶಪಡಿಸುತ್ತದೆ. ಇದು ಹಲವು ಬಾರಿ ದೇಹದ ಇತರ ಭಾಗಗಳಿಗೆ ವೇಗವಾಗಿ ಪಸರಿಸುತ್ತದೆ. ಲ್ಯುಕೇಮಿಯಾ ಕೂಡಾ ಕ್ಯಾನ್ಸರ್‌ಗೆ ಸೇರಿದರೂ ಇದು ಊತದ ಗಡ್ಡೆಯ ಲಕ್ಷಣ ಹೊಂದಿರುವುದಿಲ್ಲ. ವೈದ್ಯಕೀಯ ವಿಜ್ಞಾನದಲ್ಲಿ ಇದರ ಅಧ್ಯಯನ ಚಿಕಿತ್ಸೆ, ನಿರ್ಮೂಲನಾ ವಿಧಾನದ ವಿಭಾಗಕ್ಕೆ ಆಂಕಾಲಜಿ (Anchology) ಎಂದು ಕರೆಯುತ್ತಾರೆ.

ಕ್ಯಾನ್ಸರ್ ಎಲ್ಲಾ ವಯೋಮಾನದವರಿಗೆ ಗಂಡಾಂತರಕಾರಿ ರೋಗವೆನಿಸಿದೆ. ಇದು ವಯಸ್ಸು ಹೆಚ್ಚಾದಂತೆ ಕಾಡುವ ಕಾಯಿಲೆಯಾಗಿದೆ. ವಂಶವಾಹಿನಿಯಲ್ಲಿನ ಅಂಗಾಂಶ ಕೋಶಗಳಲ್ಲಿನ ಪರಿವರ್ತನವು ಅಸ್ವಾಭಾವಿಕತೆಯನ್ನು ತೋರಿಸುತ್ತವೆ. ಕ್ಯಾನ್ಸರ್ ರೋಗಕ್ಕೆ ಇದು ಕಾರಣವಾಗಿದೆ. ಅಸ್ವಾಭಾವಿಕ ವೈಪರೀತ್ಯಗಳು ಕ್ಯಾನ್ಸರ್‌ಕಾರಕವೆನಿಸಿವೆ. ಉದಾಹರಣೆಗೆ ತಂಬಾಕು ಮತ್ತು ಧೂಮಪಾನ, ವಿಕಿರಣತೆ, ರಾಸಾಯನಿಕಗಳು ಅಥವಾ ಸೋಂಕಿನ ಮೂಲಗಳು ಇಂತಹ ಮಾರಕ ಕಾಯಿಲೆಗೆ ಕಾರಣವಾಗಬಹುದು. ಇನ್ನೂ ಕೆಲವು ವಂಶವಾಹಿನಿಯ ವೈಪರೀತ್ಯಗಳು ಅಥವಾ ವಂಶಪಾರಂಪರಿಕವಾಗಿ ಇಡೀ ಜೀವಕೋಶಗಳಲ್ಲಿ ಹುಟ್ಟಿನಿಂದಲೇ ಬರುವ ಸಾಧ್ಯತೆಯು ಈ ಕ್ಯಾನ್ಸರ್‌ಗೆ ಮೂಲಕಾರಣವೆನ್ನಬಹುದು. ಕ್ಯಾನ್ಸರ್ ಒಂದು ವಿಭಿನ್ನ ರೋಗಗಳ ವರ್ಗವೆನಿಸಿದೆ ಆದರೆ ಇವು ಆಯಾ ಕಾರಣ ಮತ್ತು ಜೀವಶಾಸ್ತ್ರಕ್ಕೆ ಸಂಬಂಧಪಟ್ಟಿದೆ. ಯಾವುದೇ ಸಜೀವ ಪ್ರಕೃತಿಯ ಕೋಶ ಸಸ್ಯಗಳೂ ಸಹಾ ಕ್ಯಾನ್ಸರ್‌ಗೆ ತುತ್ತಾಗುತ್ತವೆ. ಸಾಮಾನ್ಯವಾಗಿ ಗೊತ್ತಿರುವ ಕ್ಯಾನ್ಸರ್‌ಗಳು ನಿಧಾನವಾಗಿ ಉಲ್ಬಣಗೊಳ್ಳುತ್ತವೆ. ಕ್ಯಾನ್ಸರ್ ಕೋಶಗಳಲ್ಲಿನ ದೋಷಗಳು ಬೆಳೆದಂತೆ ಅದರ ಸಂತತಿಯು ಮುಂದುವರೆಯುತ್ತಾ ಮಾರಕವಾಗಿ ಮಾರ್ಪಡುತ್ತದೆ.

ಕ್ಯಾನ್ಸರ್ ಗೆಡ್ಡೆಯ ಕೋಶದ ವರ್ಗ ಯಾವುದಕ್ಕೆ ಹೋಲುತ್ತದೆ ಎಂಬುದನ್ನು ತಿಳಿದುಕೊಂಡು ಅದೇ ಅಂಗಾಂಶದ ಜೀವಕೋಶಗಳು ಇದಕ್ಕೆ ಕಾರಣವಾಗಿವೆ ಎಂದು ಪತ್ತೆಹಚ್ಚಬಹುದು ಇವುಗಳು ಕಾಯಿಲೆಯ ಗುಣಲಕ್ಷಣಗಳು ಮತ್ತು ಆ ಭಾಗವನ್ನು ಅನುಕ್ರಮವಾಗಿ ತೋರಿಸುತ್ತಿವೆ. ಹಾನಿಕಾರಕ ಗೆಡ್ಡೆಗಳನ್ನು ಕಾರ್ಸಿನೋಮಾ ಸರ್ಕೋಮಾ ಅಥವಾ ಬ್ಲಾಸ್ಟೋಮಾ ಎನ್ನುತ್ತಾರೆ. ಇವುಗಳಿಗೆ ಸಾಮಾನ್ಯವಾಗಿ ಲ್ಯಾಟಿನ್ ಅಥವಾ ಗ್ರೀಕ್ ಮೂಲಕ ಪೂರ್ವಪದವನ್ನು ಬಳಸಿ ಹೆಸರಿಸಲಾಗುತ್ತದೆ. ಈ ಪದಗಳು ಮೂಲ ಅದೇ ಭಾಷೆಯ ಮೂಲಬೇರಿಗೆ ಸೇರಿದ್ದವು ಎಂದೂ ಹೇಳಲಾಗುತ್ತದೆ. ಉದಾಹರಣೆಗಾಗಿ ಜಠರದ ಕ್ಯಾನ್ಸರನ್ನು ಹುಪಾಟೋಕಾರ್ಸಿನೋಮ (Hepatocarcinoma) ಕೊಬ್ಬಿನ ಕೋಶಗಳಿಗೆ ಸಂಬಂಧಿಸಿದ ಕ್ಯಾನ್ಸರನ್ನು ಲಿಪೊಸರ್ಕೋಮಾ (Lipocarcinoma) ಎಂದು ಹೆಸರಿಸಲಾಗುತ್ತದೆ. ಸಾಮಾನ್ಯ ಕ್ಯಾನ್ಸರ್‌ಗಳಿಗಾಗಿ ಇಂಗ್ಲೀಷ್‌ನ ಅಂಗದ ಹೆಸರನ್ನಿಡಲಾಗಿದೆ. ಉದಾಹರಣೆಗಾಗಿ ಅತ್ಯಂತ ಸರ್ವೇಸಾಮಾನ್ಯ ಸ್ತನ ಕ್ಯಾನ್ಸರ್‌ನ್ನು ಸ್ತನದ ಡಕ್ಟಲ್ ಕಾರ್ಸಿನೋಮಾ ಎಂದು ಕರೆಯುತ್ತಾರೆ. ಡಕ್ಟಲ್ ಇದು ಮೈಕ್ರೋಸ್ಕೋಪ್‌ನಡಿ ಕಾಣುವ ಕ್ಯಾನ್ಸರ್ ಆಗಿದೆ. ಕ್ಯಾನ್ಸರ್‌ನ ಲಕ್ಷಣಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಬಹುದು. ಆ ಸ್ಥಳೀಯ ಲಕ್ಷಣಗಳು ಅಸಹಜ ಗೆಡ್ಡೆ ಅಥವಾ ಬಾವು, ಹೆಮ್ಮೊರೇಜ್ (haemorrhage ರಕ್ತಸ್ರಾವ) ನೋವು ಅಥವಾ ಅಲ್ಸರ್ (ಸಣ್ಣ ಗೆಡ್ಡೆ) ಕಾಣಿಸುವುದು. ಸುತ್ತಮುತ್ತಲಿನ ಜೀವಕೋಶಗಳ ಮೇಲಿನ ಒತ್ತಡದ ಭಾರ, ಕಣ್ಣುಗಳು ಮತ್ತು ಚರ್ಮ ಹಳದಿಯಾಗುವುದು. ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ವರ್ಗಾವಣೆ.

**ಲಕ್ಷಣಗಳು :** ದೊಡ್ಡದಾಗಿರುವ ಗಂಟಿನಿಂದ ಒಸರುವ ದ್ರವ ಕೆಮ್ಮು ಮತ್ತು ಹೆಪಟೈಟಿಸ್ ಹಿಪಾಟೋಮೆಗಲಿ (hepatitis heatomegaly ಅಗಲಾದ ಜಠರ), ಎಲುಬು ನೋವು, ಮುದಿತನದ ನೋವಿಗೆ ಒಳಗಾದ ಸ್ನಾಯುಗಳು ಮತ್ತು ನರಮಂಡಲಕ್ಕೆ ಸಂಬಂಧಿಸಿದ ಲಕ್ಷಣಗಳು. ಏರಿಕೆ ಗತಿಯಲ್ಲಿರುವ ಕ್ಯಾನ್ಸರ್‌ನೋವಿಗೆ ಕಾರಣವಾಗಬಹುದು. ಇದು ಬಹಳಷ್ಟು ಸಲ ಮೊದಲ ಲಕ್ಷಣವಾಗಿರುವುದಿಲ್ಲ.

**ಕ್ರಮಬದ್ಧ ಲಕ್ಷಣಗಳು :** ತೂಕ ಕಡಿಮೆಯಾಗುವುದು, ಬಾಯಿ ರುಚಿ ಕೆಡುವುದು, ದಣಿವು ಮತ್ತು ನಿಶ್ಯಕ್ತಿ, ಅತಿಯಾದ ಬೆವರು, ಅನೀಮಿಯಾ ಮತ್ತು ಸೆಳೆತದ ಲಕ್ಷಣ, ಅಂದರೆ ಅಂತಹ ಕೆಲವು ಚಿಹ್ನೆಗಳು ಕ್ರಿಯಾಶೀಲ ಕ್ಯಾನ್ಸರ್ ಗುರುತುಗಳು ಉದಾಹರಣೆಗೆ ರಕ್ತಹೆಪ್ಪುಗಟ್ಟುವಿಕೆ ಅಥವಾ ಗ್ರಂಥಿಯಲ್ಲಿನ ಬದಲಾವಣೆಗಳು.

**ಕಾರಣಗಳು :** ನಮ್ಮ ಜೀವಕೋಶಗಳು ನಕಲು ಮಾಡುವ (ನಮ್ಮ ಕೋಶಗಳು) ಸಂಭವನೀಯತೆಯ ಹಾನಿಕಾರಕಗಳ ಕಾರಣದಿಂದಾಗಿ ಹಲವಾರು ಆಂತರಿಕ ದೋಷಗಳಿಂದ ಬಳಲುತ್ತವೆ. (ರೂಪಾಂತರಗಳು ಅಥವಾ ಹಠಾತ್ ಬದಲಾವಣೆಗೆ ಒಳಪಡುತ್ತವೆ) ಆಂತರಿಕ ರೋಗಪೀಡಿತ ಕೋಶಗಳು ಹಾಗೆಯೇ ಉಳಿದುಕೊಂಡರೆ ಮತ್ತು ಕ್ಯಾನ್ಸರ್ ಸಹಿತದ ಜೀವಕೋಶಗಳ ಸೂಕ್ತ ಚಿಕಿತ್ಸೆಯಾಗದಿದ್ದರೆ ದೋಷಪೂರಿತ ಕೋಶಗಳು ಮುಂದಿನ ಪೀಳಿಗೆಯ ಕೋಶಗಳಿಗೆ ವರ್ಗಾವಣೆಗೊಳ್ಳುತ್ತವೆ. ಸಾಮಾನ್ಯವಾಗಿ ದೇಹರಕ್ಷಕ ಕವಚವು ಕ್ಯಾನ್ಸರ್‌ಗೆ ವಿರುದ್ಧವಾಗಿ ಹಲವು ವಿಧಗಳಲ್ಲಿ ಹೋರಾಡುತ್ತದೆ. ಉದಾಹರಣೆಗೆ : ಸ್ವಯಂ ಆತ್ಮಹತ್ಯಾ ಕೋಶಗಳು, ಜೀವಕಣಗಳ ಸಹಾಯಕಗಳು (ಕೆಲವು DNA ಪಾಲಿಮೆರ್‌ಸಿಸ್‌ಗಳು), ಸಾಧ್ಯವಿದ್ದಷ್ಟು ಮುಪ್ಪಾಗುತ್ತಿರುವ ಕೋಶಗಳು ಇತ್ಯಾದಿ. ಹೇಗೇ ಆದರೂ ಇಂತಹ ತಪ್ಪು ಸರಿಪಡಿಸುವ ವಿಧಾನಗಳು ಬಹಳಷ್ಟು

✍ ಶಾರದಾ ಎ. ಅಂಚನ್

ಬಾರಿ ಸಣ್ಣ ಪ್ರಮಾಣದಲ್ಲಿ ವಿಫಲಗೊಳ್ಳುತ್ತವೆ ಸಹಜವಾಗಿ ಕ್ಯಾನ್ಸರ್ ಪೀಡೆಗಳು ಹೆಚ್ಚಾಗಿ ಬೆಳೆಯುವ ಮತ್ತು ಹಸರಿಸುವ ವಾತಾವರಣದಲ್ಲಿ ಇಂತಹ ವಿರೋಧ ಪದ್ಧತಿಗಳು ಸಫಲವಾಗುವುದು ಕಡಿಮೆ. ಉದಾಹರಣೆಗೆ ಇಂತಹ ಪರಿಸರದಲ್ಲಿ ವಿನಾಶಕಾರಿ ವಸ್ತುಗಳೆಂದರೆ ಕಾರ್ಸಿನೋಜೇನ್ಸ್ (ಕ್ಯಾನ್ಸರ್‌ಗೆ ಕಾರಣವಾಗುವ ಪದಾರ್ಥಗಳು ಅಥವಾ ಪದೇ ಪದೇ ಗಾಯದ ಸಮಸ್ಯೆ) ಅಥವಾ ಜೀವಕೋಶಗಳ ಬದುಕಿಗೆ ಗಂಡಾಂತರಕಾರಿ ವಾತಾವರಣದಲ್ಲಿ ಅವುಗಳು ಸ್ಥಿರತೆಯನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ. ಇಂತಹ ಬೆಳೆಯುವ ದೋಷಗಳು ಕ್ರಿಯಾತ್ಮಕ ಜೀವಕೋಶಗಳನ್ನು ನಿಷ್ಕ್ರೀಯಗೊಳಿಸುವ ಹಂತಕ್ಕೆ ತಲುಪುತ್ತವೆ.

**ಇಂತಹಾ ಸಾಮಾನ್ಯ ತಪ್ಪುಗಳು ಸ್ವಯಂ ವರ್ಧಿಸಿಕೊಂಡು ಸಮಯ ಕಳೆದಂತೆ ಸ್ಫೋಟಕದ ಮಟ್ಟಕ್ಕೆ ಮಾರ್ಪಡುತ್ತವೆ. ಉದಾಹರಣೆಗೆ :**

1) ರೂಪಾಂತರಗೊಳ್ಳುವ ಕೋಶಗಳು ದೋಷ ಸರಿಪಡಿಸುವ ವಿಧಾನವನ್ನೇ ಬಳಸಿಕೊಂಡು ಕ್ಯಾನ್ಸರ್ ತನ್ನ ಪೀಳಿಗೆಯನ್ನು ಒಟ್ಟುಗೂಡಿಸಬಹುದು.

2) ಈ ರೂಪಾಂತರದ ಹಂತದಲ್ಲಿ ದೋಷಯುಕ್ತ ರಕ್ತದ ಮೂಲಕ ಘಾಸಿಯಾಗುವ ಅಂಗಾಂಶವು ಪಕ್ಕದ ಕೋಶಗಳಿಗೆ ಸಂಜ್ಞೆಯನ್ನು ರವಾನಿಸುತ್ತವೆ ಇದರಿಂದ ಪೀಡಿತ ಜೀವ ಕೋಶಗಳು ಪರಸ್ಪರ ಚಿಹ್ನೆಗಳನ್ನು ತೋರುತ್ತವೆ. ಈ ತೆರನಾದ ರೂಪಾಂತರವು ಊತದ ಗಡ್ಡೆಯಾಗಿ ಅಲ್ಲಿನ ಕೋಶಗಳನ್ನು ಒತ್ತಾಯ ಪೂರ್ವಕ ವಲಸೆಗೆ ಕಾರಣವಾಗುತ್ತದೆ. ಹೀಗಾಗಿ ಅತಿ ಹೆಚ್ಚು ಆರೋಗ್ಯವಂತ ಕೋಶಗಳಿಗೆ ಹಾನಿಯಾಗುವ ಸಾಧ್ಯತೆ ಇದೆ.

ಹೀಗೆ ರೂಪಾಂತರ ಕೋಶವು ಅಮರವಾಗಿ ಇನ್ನುಳಿದ ಆರೋಗ್ಯವಂತ ಅಂಗಾಂಶಗಳನ್ನು ಯಾವಾಗಲೂ ತೊಂದರೆಗೆ ಈಡುನಾಡುತ್ತದೆ.

ಕ್ಯಾನ್ಸರ್ ರೋಗವು ಸರಣಿ ಪ್ರತಿಕ್ರಿಯೆಗಳೊಂದಿಗೆ ಸ್ಫೋಟಕವಾಗಿ ಪರಿಣಮಿಸಬಲ್ಲದು. ಒಂದು ಸಣ್ಣ ದೋಷವು ಒಂದುಗೂಡಿ ಹಲವಾರು

ತಪ್ಪುಗಳಿಗೆ ಎಡೆಮಾಡಿಕೊಡಬಹುದು. ರೋಗ ಹರಡಲು ಕಾರಣವಾಗುವ ಒಂದೇ ಒಂದು ದೋಷವು ಕ್ಯಾನ್ಸರ್ ಪಸರಿಸಲು ಮೂಲಕಾರಣವಾಗಬಲ್ಲದು. ಯಾಕೆಂದರೆ ಈ ಮಾರಕ ಕಾಯಿಲೆಯ ಚಿಕಿತ್ಸೆ ಕೂಡಾ ಬಹಳಷ್ಟು ಜಟಿಲವಾಗಿದೆ. ಒಂದು ವೇಳೆ ಅಲ್ಲಿ 10 ಮಿಲಿಯ ಕ್ಯಾನ್ಸರ್‌ಯುಕ್ತ ಕೋಶಗಳಿದ್ದರೂ ಅವುಗಳಲ್ಲಿನ ಎಲ್ಲವನ್ನೂ ಕೊಂದರೂ ಕೇವಲ 10 ಇಂತಹ ಪೀಡಕ ಕೋಶಗಳು ಆರೋಗ್ಯವಂತ ಜೀವಕೋಶಗಳನ್ನು ಬೆಂಬತ್ತಿ ಕಾಡುತ್ತದೆ. (ರೋಗ ಪೀಡಿತ ಕೆಲವೇ ಕೋಶಗಳ ನಕಲುಗಳಾಗಿ ರೂಪಾಂತರಗೊಂಡು ದೋಷಯುಕ್ತ ಸಂಜ್ಞೆಗಳನ್ನು ಕಳಿಸಲು ಸಮರ್ಥವಾಗಿರುತ್ತದೆ) ಇಂತಹಾ ಬಂಡಾಯ ಪ್ರವೃತ್ತಿಯ ದೋಷಯುಕ್ತ ಜೀವಕೋಶಗಳು ಅಥವಾ ಕ್ಯಾನ್ಸರ್‌ಕಾರಕಗಳು ಇಂತಹಾ ಅನಾಹುತಕಾರಿ ಪರಿಣಾಮಕ್ಕೆ ಎಡೆ ಮಾಡಿಕೊಡುತ್ತದೆ. ಆಗ ದೇಹದ ಆರೋಗ್ಯ ವರ್ದಿಸುವ ರೋಗ ನಿರೋಧಕ ಪಡೆ ಸೋತು ಹೋದರೆ ದೇಹದ ರಚನೆಯ ವಿರುದ್ಧವೇ ಇದೊಂದು ಮಾರಕ ಹೋರಾಟವಾಗಿ ಪರಿಣಮಿಸುತ್ತದೆ. ಹೀಗೆಯೇ ದುರ್ಬಲಗೊಂಡ ದೇಹದಲ್ಲಿ ಕ್ಯಾನ್ಸರ್ ವೇಗವಾಗಿ ಬೆಳೆದು ಶರೀರದಲ್ಲಿ ಇನ್ನಷ್ಟು ತೀವ್ರ ರೀತಿಯಲ್ಲಿ ಅಕ್ರಮಣಕಾರಿಯಾಗಿ ಇದು ಮಾರ್ಪಟ್ಟಾಗ ಇದನ್ನು ಬೀಜರಹಿತ ಸಂತತಿ ಅಭಿವೃದ್ಧಿ ಎಂದು ಕರೆಯುತ್ತಾರೆ.

ಕ್ಯಾನ್ಸರ್ ನಿರ್ಮೂಲನೆಯ ವ್ಯಾಖ್ಯಾನವು ಕ್ಯಾನ್ಸರ್ ಸಂದರ್ಭಗಳನ್ನು ತಡೆಗಟ್ಟುವುದೇ ಆಗಿದೆ. ರೋಗದ ಶೇಕಡಾ 30 ರಷ್ಟು ಕ್ಯಾನ್ಸರ್ ಪಿಡುಗನ್ನು ತಪ್ಪಿಸಬಹುದಾಗಿದೆ. ಇದರಲ್ಲಿ ಅಪಾಯಕಾರಿಯಾಗಿರುವ ಸಂಭವನೀಯ ಕಾರಣಗಳಾದ ತಂಬಾಕು, ಅತಿಯಾದ ತೂಕ ಕೊಬ್ಬಿನಂಶ ಅಧಿಕವಾಗಿರುವುದು, ಕಡಿಮೆ ಹಣ್ಣು ಮತ್ತು ತರಕಾರಿ ಸೇವನೆ, ದೈಹಿಕ ವ್ಯಾಯಾಮದ ಕೊರತೆ, ಮದ್ಯಪಾನ, ಲೈಂಗಿಕ ಸೋಂಕಿನ ಕಾಯಿಲೆ, ವಾಯುಮಾಲಿನ್ಯ ಇವುಗಳಿಂದ ದೂರವಿದ್ದಷ್ಟು ಇದನ್ನು ತಡೆಗಟ್ಟಬಹುದು. ಇದರಿಂದ ಕಾರ್ಸಿನೋಜಿನ್‌ಗಳನ್ನು ದೂರ ಇಡಬಹುದು ಇಲ್ಲವೇ ಕೋಶಗಳಲ್ಲಿನ ಕ್ಯಾನ್ಸರ್ ಮಾರ್ಪಾಡಿನ ಬದಲಾವಣೆಯನ್ನು ಹಾನಿಕಾರಕವಾಗದಂತೆ ನಿರ್ಬಂದಿಸಬಹುದು. ಇದಕ್ಕಾಗಿ ಜೀವನ ಶೈಲಿ ಬದಲಾವಣೆ ಅಥವಾ ಆಹಾರ ಪದ್ಧತಿ ಕ್ಯಾನ್ಸರ್‌ಕಾರಕಗಳನ್ನು ದೂರ ಇಡಬಹುದಲ್ಲದೇ ವೈದ್ಯಕೀಯ ಸೌಕರ್ಯಗಳ ಸಕಾಲಿಕ ಬಳಕೆ ಹಾಗೂ ಪ್ರಾಥಮಿಕ ಚಿಕಿತ್ಸೆ ಇದರ ಪ್ರಥಮ ನಿರ್ಮೂಲನಾ ಕ್ರಮವಾಗಿದೆ. ಕೆಲವು ಜನರಿಗೆ ಪ್ರಾರಂಭದಲ್ಲಿ ಸೂಕ್ತ ಚಿಕಿತ್ಸೆ ದೊರೆಯದ ಕಾರಣ ಅಂತಹವರಿಗೆ ಪ್ರಾಥಮಿಕ ರೋಪತ್ತೆ ಕಾರ್ಯದೊಂದಿಗೆ ಎರಡನೆಯ ನಿರ್ಮೂಲನಾ ಕ್ರಮದ ಅನುಷ್ಠಾನಕ್ಕಾಗಿ ಅಗತ್ಯ ಮುನ್ನೆಚ್ಚರಿಕಾ ಸೂಚನೆಗಳನ್ನು ನೀಡಬಹುದಾಗಿದೆ.

ಕ್ಯಾನ್ಸರ್‌ಕಾರಕಗಳ ಬಹುತೇಕ ಅಂಶಗಳು ಪರಿಸರ ಲಕ್ಷಣ ಅಥವಾ ಜೀವನಶೈಲಿ ಸಂಬಂಧಿತ ಗುಣಲಕ್ಷಣಗಳನ್ನು ಹೊಂದಿರುತ್ತದೆ. ಕಾಯಿಲೆಯ ಅಂಶ ಕಂಡು ಬಂದ ನಂತರ ಬಹುತೇಕ ಸಂಭವನೀಯವಾದ ಕ್ಯಾನ್ಸರ್ ನಿರ್ಬಂದಿಸುವ ಸಾಧ್ಯತೆ ಇದೆ. ಅತ್ಯಾಧುನಿಕ ಜೀವನ ಶೈಲಿಯಿಂದ ಉಂಟಾಗುವ ಕ್ಯಾನ್ಸರ್ ಕಾಯಿಲೆಯ ಅಪಾಯಗಳು ಬಹುತೇಕ ಮದ್ಯಪಾನ ಇದರ ಅತಿಯಾದ ಸೇವನೆಯು ಮುಖ, ಬಾಯಿ, ಕರುಳು, ಸ್ತನ ಮತ್ತು ಇತರ ಕ್ಯಾನ್ಸರ್‌ಗೆ ಕಾರಣವಾಗುತ್ತಿದೆ. ದೂಮಪಾನ. ಶೇಕಡಾ 10ರಷ್ಟು ಪುರುಷರು ಶ್ವಾಸಕೋಶದ ಕ್ಯಾನ್ಸರ್‌ಗೆ ತುತ್ತಾಗುತ್ತಾರೆ. ದೈಹಿಕ ಚಟುವಟಿಕೆಯ ಕೊರತೆಯಿಂದ ದೊಡ್ಡ ಕರುಳು, ಸ್ತನ ಮತ್ತು ಇತರ ಕ್ಯಾನ್ಸರ್‌ಗಳು ಬರುವ ಸಾಧ್ಯತೆ ಇರುತ್ತದೆ. ಹಾಗೆಯೇ ಹೆಚ್ಚು ತೂಕದವರ ಕೊಬ್ಬಿನ ಅಂಶದಿಂದ ದೊಡ್ಡ ಕರುಳು, ಸ್ತನ, ಗ್ರಂಥಿಗಳು ಮತ್ತು ಇತರ ಕ್ಯಾನ್ಸರ್‌ಗಳು ಬರುವ ಸಾಧ್ಯತೆಗಳಿರುತ್ತವೆ. ಗ್ರಂಥಿಯ ಸುಭಂದಿತ ಸಾಕ್ಷಿ ಪ್ರಕಾರ ಹೆಚ್ಚು ಪ್ರಮಾಣದ ಮದ್ಯಪಾನವನ್ನು ಕಡಿಮೆ ಮಾಡಿದರೆ ಇದರ ಅಪಾಯ ತಪ್ಪಿಸಬಹುದಾಗಿದೆ. ತಂಬಾಕು ಸೇವನೆಯು ಇದಕ್ಕೆ ಹೋಲಿಸಿದರೆ ಇನ್ನು ಹೆಚ್ಚು ಘಾತಕವಾದುದೆಂದು ಹೇಳಲಾಗುತ್ತದೆ. ಇದರಲ್ಲಿ ತಂಬಾಕು ಮತ್ತು ಮದ್ಯಪಾನಗಳು ತೀವ್ರ ದುರ್ಬಲತೆಗೆ ಕಾರಣವಾಗುತ್ತದೆ. ಇನ್ನುಳಿದ ಜೀವನಶೈಲಿ ಮತ್ತು ಪರಿಸರದ ಅಂಶಗಳು ಹೆಚ್ಚು ಅಪಾಯ ತಂದೊಡ್ಡುತ್ತದೆ. ಇದು ಕೆಲವು ಲೈಂಗಿಕ ಸೋಂಕಿಗೆ ತುತ್ತಾದ ಉದ್ದೀಪನಕಾರಿ ಹಾರ್ಮೋನ್‌ಗಳು Ionised ವಿಕಿರಣ ಮತ್ತು ಸೂರ್ಯನ ಅಲ್ಟ್ರಾವೈಲೆಟ್ (Ultraviolet) ಕಿರಣಗಳು ಚರ್ಮ ಹದ ಮಾಡುವ ಕೇಂದ್ರಗಳಿಂದ ಸೂಸುವ ಕಿರಣ ಹಾಗೂ ಹಲವು ವೃತ್ತಿಪರ ಮತ್ತು ರಾಸಾಯನಿಕಗಳ ಬಿಡುಗಡೆಯು ಅಪಾಯದ ಅಂಶಗಳಾಗಬಹುದು.

ಪ್ರತಿವರ್ಷ ಸುಮಾರು 2 ಲಕ್ಷ ಜನರು ತಮ್ಮ ಕೆಲಸ ಮಾಡುವ ಪರಿಸರಗಳಿಂದಾಗಿ ಕ್ಯಾನ್ಸರ್‌ಗೆ ಬಲಿಯಾಗುತ್ತಿದ್ದಾರೆ. ದಶಲಕ್ಷಗಟ್ಟಲೆ ಜನರು ತಂಬಾಕು ಸೇವನೆ ಅಥವಾ ಧೂಮಪಾನದಿಂದ ಕ್ಯಾನ್ಸರ್ ಅಪಾಯವನ್ನು ಎದುರಿಸುತ್ತಿದ್ದಾರೆ. ಶ್ವಾಸಕೋಶ ಕ್ಯಾನ್ಸರ್ ಮತ್ತು ಮೆಸೋಥಿಲಿಯೊಮಾಗಳು (Mesothelioma) ಇಂತಹವರನ್ನು ಕಾಡುತ್ತಿದೆ. ಕೆಲವರು ತಮ್ಮ ಕೆಲಸ ಮಾಡುವ ಸ್ಥಳಗಳಲ್ಲಿ ಬೆಂಜೀನಿಗೆ ಒಡ್ಡಿಕೊಳ್ಳುವುದರಿಂದ ಲ್ಯುಕೇಮಿಯಾ (Leukemia) ದಂತಹ ಕಾಯಿಲೆಗೆ ಬಲಿಪಶುವಾಗುತ್ತಿದ್ದಾರೆ. ಸದ್ಯ ಅಭಿವೃದ್ಧಿಪರ ಜಗತ್ತಿನಲ್ಲಿ ವೃತ್ತಿಪರ ಜಾಗಗಳಲ್ಲಿ ಕ್ಯಾನ್ಸರ್‌ನ ಅಪಾಯಗಳು ಬಹುತೇಕ ಹೆಚ್ಚಾಗುತ್ತದೆ.

ದಶಕಗಳಿಂದ ನಡೆಯುತ್ತಿರುವ ಸಂಶೋಧನೆಗಳಿಂದ ತಿಳಿದು ಬರುವುದೇನೆಂದರೆ ತಂಬಾಕು ಬಳಕೆಯಿಂದಾಗಿ ಶ್ವಾಸಕೋಶದಲ್ಲಿ ಕ್ಯಾನ್ಸರ್, ಗಂಟಲು, ಜನನಾಂಗ, ತಲೆ, ಕುತ್ತಿಗೆ, ಜಠರ, ಮೂತ್ರಕೋಶ, ಮೂತ್ರಪಿಂಡ, ಅನ್ನನಾಳ ಮತ್ತು ಮೇದೋಜಿರಕ ಗ್ರಂಥಿಗಳಲ್ಲಿ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿವೆ. ಕ್ಯಾನ್ಸರ್‌ಗೆ ಕಾರಣವಾಗುತವ ತಂಬಾಕು ಹೊಗೆಯು ಸುಮಾರು ಶೇಕಡಾ 50ರಷ್ಟು ಕಾರ್ಸಿನೋಜೆನ್ಸ್‌ಗೆ ಕಾರಣವಾಗಿದೆ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿನ ಮೂರು ಸಾವುಗಳಲ್ಲಿ ಒಂದು ಕ್ಯಾನ್ಸರ್‌ನಿಂದ ಸಂಭವಿಸಿದ ವರದಿಗಳು ದಾಖಲಾಗಿವೆ. ಇತ್ತೀಚಿನ ವರದಿಗಳಲ್ಲಿ ಪುರುಷರ ಸಾವಿನ ಪ್ರಮಾಣವು ಶ್ವಾಸಕೋಶದ ಕ್ಯಾನ್ಸರ್‌ನಿಂದ ಕಡಿಮೆಯಾಗಿದ್ದು ಧೂಮಪಾನದ ವಿರುದ್ಧದ ಪ್ರಚಾರಾಂದೋಲನವೇ ಕಾರಣವೆಂದು ವರದಿಗಳು ತಿಳಿಸಿವೆ. ಸಾಮಾನ್ಯವಾಗಿ ವಿವಿಧ ದೇಶಗಳಲ್ಲಿನ ವಿವಿಧ ಆಹಾರ ಪದ್ಧತಿಗಳು ವಿವಿಧ ರೀತಿಯ ಕ್ಯಾನ್ಸರ್‌ಗಳಿಗೆ ಕಾರಣವಾಗಿದೆ ಎಂದು ಅಧ್ಯಯನದಿಂದ ತಿಳಿದುಬಂದಿದೆ.

ಒಟ್ಟಾರೆ ಕ್ಯಾನ್ಸರ್ ರೋಗವೊಂದು ಮಾರಕ ರೋಗವಾಗಿದೆ. ವೈದ್ಯಕೀಯ ಲೋಕದಲ್ಲಿ ಈ ಕಾಯಿಲೆಯ ನಿರ್ಮೂಲನೆಗೆ ನಾನಾ ರೀತಿಯು ಪ್ರಯೋಗಗಳು ನಡೆಯುತ್ತಿದ್ದರೂ, ಒಮ್ಮೆ ಕ್ಯಾನ್ಸರ್ ಜೀವಕೋಶಗಳು ದೇಹದಲ್ಲಿ ಉತ್ಪತ್ತಿಯಾದರೆ ಅದರಿಂದ ಮುಕ್ತಿ ಪಡೆಯುವ ಸಾಧ್ಯತೆ ವಿರಳವಾಗಿದೆ.

## ಹಳಕಟ್ಟಿಯವರ ಬದುಕು ಸಾಧನೆ...

**ವಚನ ಸಾಹಿತ್ಯ, ಸಂಶೋಧನೆ ಯಾರನ್ನೂ ಬೆರಗುಗೊಳಿಸುವಂತಹದ್ದು. ಹಳಕಟ್ಟಿಯವರ ಪ್ರಯತ್ನದಿಂದ ಸಮಗ್ರ ವಚನ ಸಾಹಿತ್ಯ ಬೆಳಕಿಗೆ ಬರುವಂತಾಯಿತು. ಕನ್ನಡದ ಧೀಮಂತ ಚೇತನ ಅವರು. ಒಬ್ಬ ನ್ಯಾಯವಾದಿಯಾಗಿ ಪತ್ರಿಕಾ ರಂಗಕ್ಕೆ ಅವರು ಕೊಟ್ಟ ಕೊಡುಗೆ ಮಹತ್ವದ್ದಾಗಿದೆ ಎಂದು ನುಡಿದರು.**

**ಇದೇ ಸಂದರ್ಭದಲ್ಲಿ ಲೇಖಕ ಎಸ್.ಕೆ. ಹಳೆಯಂಗಡಿ ಅವರ ಸುಖದ ಗುಟ್ಟು, ಡಾ.ಗೋವಿಂದ ಭಟ್‌ರವರ ಬಿದಿರಿನ ಹೂ, ಮಹೇಶ್ ಹೆಗ್ಡೆ ಅವರ ಭಾವತರಂಗ, ಡಾ.ವನಕುದ್ರಿಯವರ Urges of inner Voice ಕೃತಿಯನ್ನು ಬಿ.ಎಸ್. ಕುರ್ಕಾಲ್, ನಿತ್ಯಾನಂದ ಕೋಟ್ಯಾನ್, ದೇವದಾಸ್ ಶೆಟ್ಟಿ, ಡಾ.ಪಿ.ಕೆ.ರಾಠೋಡ್ ಬಿಡುಗಡೆ ಮಾಡಿದರು. ಮಧುಸೂದನ್ ರಾವ್, ರಮಾ ಉಡುಪ, ಡಾ. ಪೂರ್ಣಿಮಾ ಶೆಟ್ಟಿ, ಶ್ರೀನಿವಾಸ್ ಜೋಕಟ್ಟೆಯವರು ಕೃತಿ ಸಮೀಕ್ಷೆ ಮಾಡಿದರು. ಕಾರ್ಯಕ್ರಮ ಪ್ರಾರಂಭ ಸುಶೀಲಾ ದೇವಾಡಿಗ ಅವರ ಸ್ವಾಗತಗೀತೆಯಿಂದ ಆರಂಭವಾಯಿತು. ನಳಿನಾ ಪ್ರಸಾದ್ ಅವರು ಗೀತಗುಂಜನ ನಡೆಸಿಕೊಟ್ಟರು. ಡಾ.ಪೂರ್ಣಿಮಾ ಶೆಟ್ಟಿ ನಿರೂಪಿಸಿದರೆ, ಗೀತಾ ಆರ್. ಎಸ್. ಧನ್ಯವಾದಗೈದರು.**

# ಪರಿವರ್ತನೆ

ಕುಶಾಲ ಹೆಂಡತಿಯ ಕಾಗದ ನೋಡಿ ವಿಸ್ಮಯಗೊಳ್ಳುತ್ತಾನೆ. ಈ ಮುದಿ ವಯಸ್ಸಿನಲ್ಲಿ ಅತ್ತೆಗೇಕೆ ಈ ರೀತಿಯ ದುರ್ಬುದ್ಧಿ ಬಂತು ಅಂತ ಅರ್ಥವಾಗದೆ ಕೊರಗುತ್ತಾನೆ. ಮೂಢ ನಂಬಿಕೆಗೆ ಒಂದು ಮಿತಿ ಬೇಡವೇ ಅಂದುಕೊಳ್ಳುತ್ತಾನೆ. ಅತ್ತೆಯನ್ನು ಇರಿದು ಕೊಲ್ಲುವಷ್ಟು ಸಿಟ್ಟು ಬರುತ್ತದೆ. ತಾಯಿಗೂ ಮಗಳಿಗೂ ಎಷ್ಟೊಂದು ವ್ಯತ್ಯಾಸ. ತಾಯಿಯಂತೆ ಮಗಳು ಕೂಡಾ ಶಾಲೆಯ ಮುಖ ಹೇಗಿರುತ್ತದೆ ಅಂತ ಕಂಡವಳಲ್ಲದಿದ್ದರೂ ಅವಳ ವಿಚಾರಧಾರೆ ಯಾವ ಕಲಿತ ಹುಡುಗಿಗೂ ಕಡಿಮೆಯಿಲ್ಲ. ನಯ ನಾಜೂಕಿನ ಹುಡುಗಿ ಈ ಕಟುಕರ ಮನೆಯಲ್ಲಿ ಹುಟ್ಟಬಾರದಿತ್ತು. ಹುಟ್ಟಿದಳು, ಬೆಳೆದು ದೊಡ್ಡವಳಾದಳು. ನನ್ನ ಬಾಳಿನ ಬೆಳಕಾಗಿ ಬಂದಳು. ನನ್ನನ್ನೇ ಸರ್ವಸ್ವ ಅಂತ ನಂಬಿದಳು. ಯೋಚಿಸುತ್ತಾ ಹೋದಂತೆ ಕುಶಾಲನ ಮೈ ಬಿಸಿಯಾಗುತ್ತದೆ. ಕೈಯಲ್ಲಿದ್ದ ಕೆಲಸ ಬಿಟ್ಟು, ಎರಡು ದಿನದ ಮಟ್ಟಿಗೂ ಊರಿಗೆ ಹೋಗಿ ಬರುವ ಹಾಗೆ ಇಲ್ಲವಲ್ಲ ಅಂತ ತನ್ನ ಅಸಹಾಯಕ ಸ್ಥಿತಿಗೆ ಮನಸ್ಸಿನಲ್ಲೇ ಮರುಗುತ್ತಾನೆ. ತಾಯಿಯ ಕಾಟ ಸಹಿಸಲಿಕ್ಕೆ ಸಾಧ್ಯವಿಲ್ಲ; ಆದಷ್ಟು ಬೇಗ ಬಂದು ನನ್ನನ್ನು ಕರೆದುಕೊಂಡು ಹೋಗಿ ಅಂತ ಹೆಂಡತಿ ಅಕ್ಕಣಿ ಬರೆದ ಕಾಗದದ ಗುಂಟ ಕಳೆದ ಘಟನೆಗಳ ಸರಪಳಿಯಲ್ಲಿ ಸಿಕ್ಕು ಅವನ ಮನಸ್ಸು ಜರ್ಝರಿತವಾಗುತ್ತದೆ.

ಒಂದು ಕಾಲದಲ್ಲಿ ಬೊರಿವಲಿ ಸ್ಟೇಷನ್ನಿನ ಹೊರಗೆ ತನ್ನ ಸಹೋದ್ಯೋಗಿಗಳೊಂದಿಗೆ ಹಾರೆ ಗುದ್ದಲಿ ಹಿಡಿದು ಏನಾದರೂ ಚೂರುಪಾರು ಕೆಲಸ ಸಿಕ್ಕೀತೋ ಅಂತ ಹೊತ್ತು ನೆತ್ತಿಗೆ ಬರುವ ತನಕ ಕಾದು ನಿಂತು ನಿರಾಶನಾಗಿ ಹಿಂತಿರುಗುತ್ತಿದ್ದ ನಾನೇ ಈ ಕುಶಾಲ ಅಂದರೆ ಯಾರಿಗೂ ಅಚ್ಚರಿಯಾದೀತು! ಅವರಿವರ ಫ್ಲಾಟ್‌ಗಳಲ್ಲಿ ಅಪರೂಪಕ್ಕೊಮ್ಮೆ ಸಿಗುವ ಚಿಕ್ಕಪುಟ್ಟ ರಿಪೇರಿಂಗ್ ಮಾಡಿಕೊಂಡಿದ್ದ ನನಗೆ ಕೊನೆಗೂ 86ರ ಆರಂಭದಲ್ಲಿ ದೊಡ್ಡ ಬ್ರೇಕ್ ಸಿಕ್ಕಿತು ಅಂತಾಯಿತು. ಇತ್ತೀಚೆಗೆ ಗಾಳಿ ಮಳೆಯಿಲ್ಲದೆ ಮುಕುಸಿದ ಕೆಲವು ಬಿಲ್ಡಿಂಗ್‌ಗಳನ್ನು ಗಮನಿಸಿ ರಾಜ್ಯಸರಕಾರ ಹಾಗೂ ಮುನಿಸಿಪಾಲಿಟಿ ಒಟ್ಟಾಗಿ ಸರ್ವೇ ನಡೆಸಿ ಮುಂಬಯಿಯ ಹಲವು ಬಿಲ್ಡಿಂಗ್‌ಗಳಿಗೆ ಮಾನ್ಸೂನಿನ ಮೊದಲು 'repair a must' ಅಂತ ಘೋಷಿಸಿದಾಗ ಅದರ ಲಾಭ ಪಡೆದವರಲ್ಲಿ ನಾನೂ ಒಬ್ಬ. ಮೊದಲು ಸಿಕ್ಕಿದ ಮೂರಂತಸ್ತಿನ ಕಟ್ಟಡದ ರಿಪೇರಿಂಗ್ ಹಾಗೂ ಪ್ಲಾಸ್ಟರಿಂಗ್ ಕೆಲಸವನ್ನು ನಾಜೂಕಾಗಿ ನಿರ್ವಹಿಸಿದ ನಾನು ಹತ್ತು ಹಲವು ಹೌಸಿಂಗ್ ಸೊಸೈಟಿಗಳ ಮನಸೂರೆಗೊಂಡಿದ್ದೆ. ರಾತ್ರಿ ಬೆಳಗಾಗುವುದರೊಳಗೆ ಟೆಂಪೊರರಿ ಎಡ್ರಾಸ್ ಹಾಕಿಸಿ, 'Kushal Building Contractors & Repairers' ಅಂತ ಅಚ್ಚು ಹಾಕಿಸಿದ ಕಾರ್ಡುಗಳನ್ನು ಕೈ ಕುಲುಕಿದವರಿಗೆಲ್ಲಾ ಒಂದೊಂದಾಗಿ ಅಂಟಿಸಿದ್ದೆ. ಇಷ್ಟೇ ಸಾಕಾಯಿತು. ಗ್ರಾಂಟ್‌ರೋಡ್ ಹಾಗೂ ದೋಬಿ ತಲಾವ್ ಏರಿಯಾದಲ್ಲಿ ಸಣ್ಣದು ದೊಡ್ಡದು ಮೈನರ್ ಮೇಜರ್ ಅಂತ ಸುಮಾರು ಹದಿನೈದು ಬಿಲ್ಡಿಂಗ್‌ಗಳ ರಿಪೇರಿಂಗ್ ಕಾಂಟ್ರಾಕ್ಟ್ ಸಿಕ್ಕಿತು. ಮತ್ತೆ ತಡ ಮಾಡಲಿಲ್ಲ. ಕೆಲವಿಷ್ಟು ಅಗತ್ಯದ ಮೆಷಿನರಿ ಪರ್ಚೇಸ್ ಮಾಡಿಕೊಂಡು ಕೆಲಸ ಭರದಿಂದ ಪ್ರಾರಂಭಿಸಿದೆ. ಎಷ್ಟೇ ಜೋರಾಗಿ ಕೆಲಸ ನಡೆಯುತ್ತಿದೆ ಎಂದರೂ ನಡುನಡುವೆ ಕೆಲಸ ಕುಂಟುತ್ತಿರುವಂತೆ ಭಾಸವಾಗುತ್ತಿತ್ತು. ಮೊದಲ ಮಳೆ ಬೀಳುವ ಮೊದಲು ರಿಪೇರಿಂಗ್ ಕೆಲಸ ಎಲ್ಲಾ ಮುಗಿಸಿ ಬಿಡುವ ಅಂದಾಜು ಹಾಕಿಕೊಂಡಿದ್ದರೂ ಸಿಮೆಂಟಿಲ್ಲ ಮತ್ತೊಂದಿಲ್ಲ NOCಸಿಕ್ಕಿಲ್ಲ ಅಂತ ಒಂದಲ್ಲ ಒಂದು ಕಾರಣದಿಂದ ಕೆಲಸ ಹಿಂದೇಟು ಹಾಕುತ್ತಿತ್ತು. ಇವೆಲ್ಲದರ ತಲೆಯ ಮೇಲೆ ಹೊಡೆಯುವಂತೆ ಈಗ ಇನ್ನೊಂದು ಹೊಡೆತ ಬಿದ್ದಾಗ ಮಾತ್ರ ನಾನು ಪೂರ್ಣ ಇಳಿದು ಹೋಗಿದ್ದೆ.

ಮೊದಲ ಬಾಣಂತಿತನ ತವರು ಮನೆಯಲ್ಲೇ ಆಗಬೇಕು ಎನ್ನುವ ಅತ್ತೆಯ ಹಠಮಾರಿ ಬುದ್ಧಿಗೆ ಮಣಿದು ಅಕ್ಕಣಿಯನ್ನು ತವರು ಮನೆಗೆ ಕಳುಹಿಸಿಕೊಟ್ಟಿದ್ದೇನೋ ನಿಜ. ಈಗ ನೋಡಿದರೆ ಕಳುಹಿಸಲೇ ಬಾರದಿತ್ತು ಅನ್ನಿಸುತ್ತದೆ. ಅವಳನ್ನು ಕಳುಹಿಸಿದ ಕೆಲವೇ ದಿನಗಳಲ್ಲಿ ಒಮ್ಮೆ ತುರ್ತಾಗಿ ಊರಿಗೆ ಹೋಗಿ ಬಂದೆ. ನಾನು ಹೋಗುವುದು ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದರೂ ಪಾಪಿಗಳು ಅಕ್ಕಣಿಯನ್ನು ಸರಿಯಾಗಿ ನೋಡಿಕೊಳ್ಳದೆ ಕೊಂದೇ ಬಿಡುತ್ತಿದ್ದರು. ಹೊಟ್ಟೆನೋವು ಅಂತ ಇವಳು ಎರಡು ಹಗಲು ಮೂರು ರಾತ್ರಿ ಒಂದೇ ಸವನೆ ಒದ್ದಾಡಿಕೊಳ್ಳುತ್ತಿದ್ದಾಗ ಹೆರಿಗೆಯ ಹೊಟ್ಟೆನೋವು; ಇನ್ನೇನು ಹಡೆಯುತ್ತಾಳೆ ಅಂತ ಡಾಕ್ಟರಿಗೆ ತೋರಿಸುವ ಬದಲು ಮನೆಯಲ್ಲೇ ಇರಿಸಿಕೊಂಡು ವೃಥಾ ಕಾಲಹರಣ ಮಾಡಿ ಇವಳ ತಾಯಿ ಒಂದು ಬಹು ದೊಡ್ಡ ಅನಾಹುತಕ್ಕೆ ಕಾರಣಳಾಗುತ್ತಿದ್ದಳು. ಹೆಂಡತಿಯ ಕೈಗೊಂಬೆಯಾಗಿದ್ದ ಇವಳ ಅಪ್ಪನಿಗೆ ಅದೇನು ಬುದ್ಧಿ ಬಂತೋ. ಒಂದು ಟೆಲಿಗ್ರಾಂ ಕಳುಹಿಸಿದ. ಟೆಲಿಗ್ರಾಂ ಕಂಡವನೇ ಊರಿಗೆ ಹೋಗಿ ನೋಡುತ್ತೇನೆ; ಏನು ನೋಡುವುದು- ಅಕ್ಕಣಿ ಜಾಂಡೀಸಿಗೆ ತುತ್ತಾಗಿ ಹಳದಿ ಬಣ್ಣಕ್ಕೆ ತಿರುಗಿದ್ದಾಳೆ. ಮೈತುಂಬ ಎಲ್ಲಾ ಬೀಗಿ ದಪ್ಪದಪ್ಪ ಆಗಿದೆ. ಮೂತ್ರ ನಿಂತಿದೆ. ಹೆರಿಗೆ ಹೊಟ್ಟೆ ನೋವಿಗೂ ಇತರ ಹೊಟ್ಟೆನೋವಿಗೂ ವ್ಯತ್ಯಾಸ ಕಂಡುಕೊಳ್ಳಲಾರದ ಮೂರ್ಖರು ಅಂತ ಮನಸ್ಸಿನಲ್ಲೇ ಶಪಿಸುತ್ತಾ ಕಾಲ ವಿಳಂಬ ಮಾಡದೆ ಅಕ್ಕಣಿಯನ್ನು ಆಸ್ಪತ್ರೆಗೆ ಸೇರಿಸಿದ್ದೆ. ಅವಳು ಬದುಕುತ್ತಾಳೆಂಬ ಆಸೆ ನನಗಿರಲಿಲ್ಲ. ಏನೋ ಅವಳೊಟ್ಟಿಗೆ ಇನ್ನೂ ಕೆಲವು ಕಾಲ ಬಾಳುವ ಪುಣ್ಯ ನಾನು ಮಾಡಿರಬೇಕು. ದಿನದಿಂದ ದಿನಕ್ಕೆ ಅಕ್ಕಣಿ ನಿಧಾನವಾಗಿ ಚೇತರಿಸಿಕೊಂಡಳು. ನಾನು ಹಿಡಿದಿದ್ದ ಕಾಂಟ್ರಾಕ್ಟಿನ ಕೆಲಸ ಅರ್ಧದಲ್ಲೇ ನಿಲ್ಲಿಸಿ ಊರಿಗೆ ಹೋಗಿದ್ದರಿಂದ ಊರಿನಲ್ಲಿ ಹೆಚ್ಚು ದಿನ ನಿಲ್ಲುವಂತಿರಲಿಲ್ಲ. ಅಕ್ಕಣಿಗೆ ಸಮಜಾಯಿಸಿ ಹೇಳಿ ಮುಂಬಯಿಗೆ ಹೊರಟು ಬಂದಿದ್ದೆ. ಅದಾದ ಹದಿನೈದು ದಿನಕ್ಕೆ ಅಕ್ಕಣಿ ಜಾಂಡೀಸ್‌ನಿಂದ ಗುಣಮುಖ ಹೊಂದಿ ಹೆಣ್ಣು ಮಗುವಿಗೆ ಜನ್ಮವಿತ್ತಿದ್ದಾಳೆ ಅಂತ ಮಾವನಿಂದ ಕಾಗದ ಬಂದಿತ್ತು. ಮಗು ಹೆಣ್ಣಾಗಲಿ ಗಂಡಾಗಲಿ ಸದ್ಯ ಅಕ್ಕಣಿ ಬದುಕಿದಳಲ್ಲಾ ಎಂಬ ನೆಮ್ಮದಿ ದೊರೆತಿತ್ತು. ಈಗ ನೋಡಿದರೆ.....

ಕುಶಾಲನಿಗೆ ಮೈ ಕುದಿಯತೊಡಗಿತು. ಆದಷ್ಟು ಬೇಗ ನನ್ನನ್ನು ಈ ನರಕದಿಂದ ತಪ್ಪಿಸಿ ಅಂತ ಹೆಂಡತಿಯ ಕಣ್ಣೀರಿನಲ್ಲೇ ಬರೆದಂತಿದ್ದ ಕಾಗದ ನೋಡಿ ಕುಶಾಲನಿಗೆ ಕ್ರೋಧ ನೆತ್ತಿಗೇರುತ್ತದೆ. ತಾನು ಮಾಡಿದ ತಪ್ಪಿಗೆ ಇನ್ನೊಬ್ಬರನ್ನು ಬಲಿಕೊಡುವ ನಿನ್ನ ತಾಯಿಯಂತವರು ಬದುಕಿದ್ದಷ್ಟು ದಿನ ಅನಾಹುತ ತಪ್ಪಿದ್ದಲ್ಲ. ಅವಳ ಮಾತಿಗೆ ಮರುಳಾಗಬೇಡ- ನಾನೇ ಸ್ವತಃ ಬರುತ್ತಿದ್ದೆ. ಆದರೆ ನಿನಗೆ ಗೊತ್ತಿದೆ. ನಾನು ಎಂತಹ ಸಂದಿಗ್ಧದಲ್ಲಿ ಸಿಲುಕಿದ್ದೇನೆ ಅಂತ. ಆದ್ದರಿಂದ ಈ ಪತ್ರ ತಲುಪಿದ ಕೂಡಲೇ ಮುಂಬಯಿಗೆ ಹೊರಟು ಬಾ. ಯಾವ ದಿನ ಹೊರಡುತ್ತಿ ಎನ್ನುವುದನ್ನು ತಿಳಿಸು. V.T. ಯಲ್ಲಿ ರಿಸೀವ್ ಮಾಡಲು ನಿನಗಾಗಿ ಕಾಯುತ್ತಿರುತ್ತೇನೆ. ಯಾವುದಕ್ಕೂ ಕಾಗದ ಬರೆ ಅಂತ ಚುಟುಕಾಗಿ ಬರೆದು ಪೋಸ್ಟ್ ಮಾಡಿದವ ತಲೆ ಸಣ್ಣಗೆ ಸಿಡಿಯುತ್ತಿರುವ ಅನುಭವವಾಗಿ ಕುಶಾಲ ಕುಳಿತ ಕುರ್ಚಿಯಲ್ಲೇ ಹಿಂದಕ್ಕೊರಗಿ ಕಣ್ಣು ಮುಚ್ಚಿಕೊಳ್ಳುತ್ತಾನೆ. ಎರಡು ಮೂರು ಮುಳುಗು ಈಗಾಗಲೇ ಹಾಕಿಯಾಗಿದೆ. ಕೊನೆಯದಾಗಿ ಎಂಬಂತೆ ತುಂಡು ಸೀರೆ ಉಟ್ಟು ಎದೆ ಆಳದ ನೀರಿನಲ್ಲಿ ನಿಂತ ಅಕ್ಕಣಿ ಒಮ್ಮೆ ಕಣ್ಣು ತೆರೆದು ಸುತ್ತಲೂ ನೋಡುತ್ತಾಳೆ. ಎಲ್ಲೆಲ್ಲೂ ಜನ ಸಮೂಹ. ಎಲ್ಲಾ ಕಣ್ಣುಗಳು ತನ್ನತ್ತಲೇ ನೆಟ್ಟಿವೆ. ತಾನು ಬೆತ್ತಲೆಯಾಗುವುದನ್ನು ನೋಡಲು ಕಾತರಗೊಂಡಿವೆ. ಪತ್ರಕರ್ತರು, ಕ್ಯಾಮರಾಮ್ಯಾನ್, ಪೊಲೀಸರು, ಪುಂಡಪೋಕರು, ಗಣ್ಯವ್ಯಕ್ತಿಗಳು, ಜನಸಾಮಾನ್ಯರು... ಎಲ್ಲರೂ ಇದ್ದಾರೆ. ಅವರು ಮಾತ್ರ ಇಲ್ಲ! ಬಹುಶಃ ಬಂದಿರಲಿಕ್ಕೇ ಇಲ್ಲ. ಬಂದಿದ್ದೇ ಆಗಿದ್ದಲ್ಲಿ ನನ್ನನ್ನು ಈ ರೀತಿಯ ಅಪಹಾಸ್ಯಕ್ಕೆ ಎಂದೂ ಗುರಿ ಮಾಡುತ್ತಿದ್ದಿಲ್ಲ. ಬಹುಷ ನನ್ನ ಕಾಗದವೇ ಸಿಕ್ಕಿಲ್ಲವೋ

**✍ ಜಿ.ವಿ. ಕಂಚುಗಾರ**

ಏನೋ ಸಿಕ್ಕಿದ್ದರೆ ಖಂಡಿತ ಖಂಡಿತ ಬಾರದೇ ಉಳಿಯುತ್ತಿರಲಿಲ್ಲ. ನಾನು ಅಷ್ಟು ಬರೆದ ಮೇಲೆ ಎರಡು ದಿನದ ಮಟ್ಟಿಗಾದರೂ ಬಂದೇ ಬರುತ್ತಿದ್ದರು. ನನ್ನನ್ನು ಅಷ್ಟಾಗಿ ಹಚ್ಚಿಕೊಂಡಿದ್ದಾರೆ. ನನ್ನನ್ನಲ್ಲದಿದ್ದರೂ ನಮ್ಮ ಕನಸಿನ ಕುಡಿ ಮುದ್ದು ಮಗಳನ್ನಾದರೂ  ನೋಡುವ ಅಂತ ಬಂದೇ ತೀರುತ್ತಿದ್ದರು.

ಮೊನ್ನೆ ಬಂದು ಹೋಗಿದ್ದರಂತೆ. ನನಗೆ ಮಾತ್ರ ವರ್ಷ ಎರಡು ವರ್ಷಗಳ ಹಿಂದೆ ನೋಡಿದ ಅನುಭವ. ನಾನು ಅರೆಬರೆ ಜ್ಞಾನಾವಸ್ಥೆಯಲ್ಲಿದ್ದುದರಿಂದ ಸರಿಯಾಗಿ ಎರಡು ಮಾತಾಡಲಿಕ್ಕೂ ಆಗಿರಲಿಲ್ಲ. ಅವರು ಹೇಳುವುದಷ್ಟನ್ನು ಮಾತ್ರ ಕಿವಿಗೆ ಹಾಕಿಕೊಂಡಿದ್ದೇನೇ ವಿನಹಃ ನಾನಾಗಿ ಏನೂ ಮಾತಾಡುವ ಸ್ಥಿತಿಯಲ್ಲಿರಲಿಲ್ಲ. ಅವರ ಮುಖ ಎಲ್ಲೋ ಕನಸಿನಲ್ಲಿ ಕಂಡಂತಾಗಿತ್ತು ಅಷ್ಟೇ. ಅವರು ಬಾರದಿರುತ್ತಿದ್ದರೆ ನಾನು ಉಳಿಯುತ್ತಿರಲಿಲ್ಲ ಎನ್ನುವುದೇನೋ ಕಟು ಸತ್ಯ. ಆದರೆ ನನ್ನಮ್ಮನ ಕೊಂಕು ಮಾತೇ ಬೇರೆ. ನಾನುಳಿದದ್ದು ಆಸ್ಪತ್ರೆಗೆ ಸೇರಿಸಿದ್ದರಿಂದಲ್ಲವಂತೆ. ಔಷಧಿಯಾಗಲೀ ಚಿಕಿತ್ಸೆಯಾಗಲಿ ಈ ಸ್ಥಿತಿಯಲ್ಲಿ ಕಾರ್ಯಕ್ಕೆ ಬರುವುದಿಲ್ಲವಂತೆ. 'ಎಲ್ಲಾ ಆ ರೇಣುಕಾಂಬೆಯ ಕೃಪೆಯಂತೆ. ನಾನು ಪ್ರಜ್ಞಾಶೂನ್ಯಳಾಗಿ  ಬಿದ್ದಿದ್ದಾಗ ರೇಣುಕಾಂಬೆ, ನೀನೇ ನನ್ನ ಮಗಳನ್ನು ರಕ್ಷಿಸಬೇಕಮ್ಮ. ಈಗೋ ನನ್ನ ಮಗಳನ್ನು ನಿನ್ನ ಮಡಿಲಿಗೆ ಹಾಕುತ್ತಿದ್ದೇನೆ. ಅವಳನ್ನು ಅಳಿಸುವುದು ಉಳಿಸುವುದು ನಿನಗೆ ಸೇರಿದ್ದು. ಉಳಿಸಿದಿಯಂತಾದರೆ ಅವಳ ಮುಖಾಂತರ ನಿನಗೆ ಈ ವರ್ಷ ಬೆತ್ತಲೆ ಸೇವೆ ಮಾಡಿಸುತ್ತೇನೆ. ನಮ್ಮನ್ನು ಕಾಪಾಡು ತಾಯಿ' ಅಂತ ಗೋಳೊಯ್ದು ಹರಕೆ ಹೊತ್ತದ್ದರಿಂದ ನಾನು ಬದುಕುಳಿದೆ ಅನ್ನುವುದು ನನ್ನಮ್ಮನ ಮತ. ನಾನು ಮಾತ್ರ

ಇದಾವುದಕ್ಕೂ ಸೊಪ್ಪು ಹಾಕುವವಳಲ್ಲ. ಆ ಪಾಠಿಯ ಹೆರಿಗೆ ಹೊಟ್ಟೆನೋವು ಬಂದಾಗಲೂ ನನಗೆ ನಾಲ್ಕು ಜನರ; ಅದೂ ಹೆಂಗಸರ ಎದುರು ನಗ್ನಳಾಗಲು ನಾಚಿಕೆಯಾಗಿತ್ತು. ಅಂತಹ ನಾನು ಈ ಪಾಠಿಯ ಸಾವಿರಾರು ಲಕ್ಷಾಂತರ ಜನರೆದುರು ಬೆತ್ತಲೆ ಸೇವೆ ಮಾಡಿಯೇನೆಂದು ನನ್ನ ತಾಯಿಯಾದರೂ ಅದ್ಹೇಗೆ ಊಹಿಸಿದಳು ಅಂತ ನನಗೇ ಆಶ್ಚರ್ಯವಾಗುತ್ತಿದೆ. ಅಷ್ಟು ಅಗತ್ಯವಿದ್ದಲ್ಲಿ ಸ್ವತಃ ಅವಳೇ ಬೆತ್ತಲೆ ಸೇವೆ ಮಾಡುವುದಾಗಿ ಹೇಳಿಕೊಳ್ಳಬಹುದಿತ್ತಲ್ಲ. ನನ್ನನ್ನೇಕೆ ಬಲಿಪಶುವನ್ನಾಗಿ ಮಾಡಬೇಕಿತ್ತು. ಮೊನ್ನೆ ಮೊನ್ನೆಯ ತನಕ ನನಗಾಗಲಿ ನನ್ನವರಿಗಾಗಲಿ ಈ ಹರಕೆಯ ವಿಷಯ ಗೊತ್ತಿರಲೇ ಇಲ್ಲ. ನನ್ನ ಗಂಡನಿಗೆ ಗೊತ್ತಾಗದಂತೆ ಹರಕೆ ಮುಗಿಸಿ ಬಿಡುವುದು ಅಂತ ಇವರು ಉಪಾಯ ಹೂಡಿರಬೇಕು. ಆದರೆ ನಾನು ಕೂಡಾ ಇವರೆನಿಸಿಕೊಂಡಷ್ಟು ದಡ್ಡೆಯಲ್ಲ. ಅವರಿಗೆ ಎಲ್ಲಾ ವಿಷಯ ಸವಿಸ್ತಾರವಾಗಿ ಬರೆದು ಪತ್ರ ಹಾಕಿಸಿದ್ದೆ. ಆದರೇನು ಬಂತು. ಉತ್ತರವೇ ಇಲ್ಲ. ಪತ್ರ ಇಲ್ಲ; ಪತ್ತೆಯೂ ಇಲ್ಲ. ಅವರ ಕೆಲಸವೇ ಹಾಗೆ. ಒಮ್ಮೆ ಕೆಲಸದಲ್ಲಿ ಮೈಮರೆತರಂತಾದರೆ ಎಲ್ಲಾ ಮರೆತು ಬಿಡುತ್ತಾರೆ; ಹೆಂಡತಿ, ಮನೆ... ಮಗು..., ಮಠ ಎಲ್ಲ.

ತಂದೆ ತಾಯಿ ಸಂಬಂಧಿಕರು ಅಂತ ಎಲ್ಲಾ ಒಟ್ಟಾಗಿ ನನ್ನನ್ನು ಬಲಾತ್ಕಾರವಾಗಿ ನನ್ನ ಮನಸ್ಸಿಗೆ ವಿರುದ್ಧವಾಗಿ ಇಲ್ಲಿಯವರೆಗೆ ತಂದು ನಿಲ್ಲಿಸಿದ್ದಾರೆ. ಬೆತ್ತಲೆ ಸೇವೆ ನನ್ನಿಂದ ಸಾಧ್ಯವಿಲ್ಲ. ಅದನ್ನೊಂದನ್ನು ಮಾತ್ರ ಹೇಳಬೇಡಿ ಅಂತ ಇವರೆಲ್ಲರ ಕೈಕಾಲು ಹಿಡಿದು ಗೋಳೆರೆದುಕೊಂಡದ್ದು ವ್ಯರ್ಥವಾಯಿತು. ನನ್ನ ಬುದ್ಧಿಯನ್ನೆಲ್ಲಾ ಖರ್ಚು ಮಾಡಿ ನೋಡಿಯಾಯಿತು. ಇನ್ನು ನನಗೆ ಇದರಿಂದ ಬಿಡುಗಡೆ ಇಲ್ಲ ಎನ್ನುವುದು ನಿಶ್ಚಿತ. ಅವರಾದರೂ ಬಂದು ನನ್ನನ್ನು ಈ ನರಕದ ಕುಂಡದಿಂದ ಪಾರು ಮಾಡಿಯಾರು ಅಂತ ಕಂಡ ಕನಸು ಕೊನೆಗೂ ಹುಸಿಯಾಯಿತು. ನನ್ನ ಕೌಟುಂಬಿಕ ಜೀವನದ ಆಸೆಯೆಲ್ಲಾ ಮಣ್ಣು ಪಾಲಾದ ಹಾಗೆಯೇ. ಸಾಯುವುದೊಂದೇ ಈಗ ನನಗೆ ಉಳಿದ ದಾರಿ. ಸಾಯುವುದು ಸಾಯುವುದೇ; ಹಾಗಂತ ಸುಮ್ಮನೇ ಸಾಯಬಾರದು. ಕೊನೆಗಳಿಗೆಯಲ್ಲಾದರೂ ನೀಚರಿಗೊಂದು ಪಾಠ ಕಲಿಸಿಯೇ ಸಾಯಬೇಕು. ಒಮ್ಮೊಮ್ಮೆ ನನಗನ್ನಿಸುತ್ತದೆ; ನನ್ನವರಿಗಾಗಿಯಲ್ಲದಿದ್ದರೂ ಹೆತ್ತ ಕರುಳಿನ ಕುಡಿಗಾಗಿಯಾದರೂ ಬದುಕುವ ಅಂತ. ಆದರೆ ಈ ಪಾಪಿಗಳು ಬಿಟ್ಟರೆ ತಾನೇ. ಬೆತ್ತಲೆ ಸೇವೆಯ ಹಿಂಸೆ ಒಂದು ರೀತಿಯ ಚಿತ್ರಹಿಂಸೆ. ಮಾನ ಮೂರು ಕಾಸಿಗೆ ಹರಾಜು ಮಾಡಿದವರು ಕೂಡಾ ಈ ರೀತಿಯ ಹಿಂಸೆ ಪಡಲಾರರು ಅನಿಸುತ್ತದೆ. ಏನೇ ಇರಲಿ ಇನ್ನು ಹೆಚ್ಚು ಹೊತ್ತು ನೀರಿನಲ್ಲಿ ನಿಂತಿರುವಂತ್ತಿಲ್ಲ. ಎಷ್ಟು ಜನರ ಹದ್ದಿನ ಕಣ್ಣು ಈಗಾಗಲೇ ನನ್ನ ಮೇಲೆ ಬಿದ್ದಿದೆಯೋ ಈಗ ಮುಳು ಹಾಕಿದವಳು ಮತ್ತೆ ಮೇಲೇಳಬಾರದು. ನನ್ನದೆಂಬ ಸಂಬಂಧಗಳನ್ನೆಲ್ಲಾ ಕಳಚಿಕೊಂಡು ದೂರ ಸಾಗಬೇಕು. ನೀರಲ್ಲಿ ನೀರಾಗಿ ಹರಿಯಬೇಕು.

ಇಷ್ಟೆಲ್ಲಾ ಯೋಚಿಸಿ ನೀರಿನಲ್ಲಿ ಕೊನೆಯ ಮುಳುಗು ಹಾಕುವ ಹೊತ್ತಿಗೆ ಅಕ್ಕಣಿಯ ಕಣ್ಣುಗಳು ಶುಷ್ಕಗೊಂಡು ಸಮಾಜವನ್ನೇ ಸುಟ್ಟು ಬಿಡುವಂತೆ ಬೆಂಕಿಯುಂಡೆ ಕಾರುತ್ತಿದ್ದವು. ಅವಳು ನೀರಿನಲ್ಲಿ ಮುಳುಗಿದ್ದೇ ತಡ. ಬಿಸಿವಸ್ತುವೊಂದನ್ನು ನೀರಿನಲ್ಲಿ ಮುಳುಗಿಸಿದಾಗ ಏಳುವ ಗುಳ್ಳೆಗಳಂತೆ ನೀರು ದೊಡ್ಡ ದೊಡ್ಡ ಗುಳ್ಳೆಗಳನ್ನೆಬ್ಬಿಸಿ ಹಾಗೆಯೇ ಸ್ತಬ್ಧವಾಯಿತು. ವರಾಹ ನದಿ ದಂಡೆಯ ಮೇಲೆ ಭಾರೀ ಕೋಲಾಹಲವೆದ್ದಿದೆ. ಸದ್ದುಗದ್ದಲ ತಾರಕಕ್ಕೇರುತ್ತಿದೆ. ಜನರೆಲ್ಲಾ ಚೆಲ್ಲಾಪಿಲ್ಲಿಯಾಗಿ ಸಿಕ್ಕಸಿಕ್ಕತ್ತ ಓಡುತ್ತಿದ್ದಾರೆ. ಮಕ್ಕಳ ಕಿರುಚಾಟ, ಹೆಂಗಸರ ಚೀರಾಟ, ಮುದುಕರ ನರಳುವಿಕೆ ಯಾರ ಕಿವಿಗೂ ಬಿದ್ದಂತಿಲ್ಲ. ಎಲ್ಲಾ ಕಾಲಿಗೆ ಬುದ್ಧಿ ಹೇಳುತ್ತಿದ್ದಾರೆ. ಯಾಕೆ ಏನು ಅಂತ ಕೇಳುವವರೇ ವಿನಹ ಇಂತಹುದೇ ನಡೆಯಿತು ಅಂತ ಗೊತ್ತಿದ್ದವರು ಅಲ್ಲಿ ಒಬ್ಬರೂ ಇದ್ದಂತೆ ಕಾಣಲಿಲ್ಲ. ಒಂದೇ ಒಂದು ಅಭಾಸವೆಂದರೆ ಬಿಸಿರಕ್ತದ ಕೆಲವು ಪುಂಡಪೋಕರು ಈ ವಿಷಮ ಪರಿಸ್ಥಿತಿಯ ಲಾಭ ಪಡೆಯುತ್ತಿದ್ದರೆ ಇನ್ನು ಕೆಲವರು ತಮಾಷೆ ನೋಡುತ್ತಿದ್ದಾರೆ.

ಜಗತ್ತು ಯಾವ ರೀತಿ ಮುಂದುವರಿಯುತ್ತಿದೆ ಅಂತ ಗೊತ್ತಿದ್ದೂ ಬೆತ್ತಲೆ ಸೇವೆಯಂತಹ ವಿಷಯಗಳಿಗೆ ಇಷ್ಟೊಂದು ಮಹತ್ವ ಕೊಡುವುದು ಮೂಢನಂಬಿಕೆಯ ಪರಮಾವಧಿ ಅಂತ ಅದನ್ನು ತಡೆಗಟ್ಟುವತ್ತ ದಿಟ್ಟ ಹೆಜ್ಜೆ ಹಾಕಿದ ಪೊಲೀಸ್ ದಳ ಹಾಗೂ ದಲಿತ ಸಂಘರ್ಷ ಸಮಿತಿಗಳು ತಮ್ಮ ಕಾರ್ಯದಲ್ಲಿ ವಿಫಲಗೊಂಡು ಭಕ್ತ ಜನಗಳ ಕ್ರೋಧಕ್ಕೆ ಗುರಿಯಾದದ್ದೆ ಇಷ್ಟೆಲ್ಲ ರಾದ್ಧಾಂತಕ್ಕೆ ಕಾರಣ ಅಂತ ಗೊತ್ತಾಗುವಷ್ಟು ಹೊತ್ತಿಗೆ ವಿಷಯ ಉಲ್ಬಣಗೊಂಡಿತ್ತು. ಸಿಕ್ಕಸಿಕ್ಕವರನ್ನು ಬೆತ್ತಲೆಗೊಳಿಸುವ ನೀಚ ಪ್ರವೃತ್ತಿ ನಡೆದಿತ್ತು. ಭಕ್ತ ಸಮೂಹ ಕೆಲವು ಪ್ರಭಾವೀ ಮುಖಂಡರ ಕಪಿಮುಷ್ಠಿಯಲ್ಲಿ ಹಿಂಸಾಚಾರಕ್ಕೆ ತೊಡಗಿತ್ತು. ಪರಿಸ್ಥಿತಿ ಕೈ ಮೀರಿ ಹೋಗದಂತೆ ಹದ್ದು ಬಸ್ತಿನಲ್ಲಿರಿಸಲು ಪ್ರಯತ್ನಿಸಿ ಸೀಮಿತ ಪೊಲೀಸ್ ಪಡೆ ಸುಸ್ತಾಗಿ ಹೋಗಿತ್ತು.

ಘಟನೆಗಳ ಸರಮಾಲೆ ಒಂದರ ಹಿಂದೊಂದರಂತೆ ನಡೆದು ಪರಿಸ್ಥಿತಿ ಒಂದು ಮಟ್ಟಕ್ಕೆ ಬಂದು ವಾತಾವರಣ ಶಾಂತವಾಗುತ್ತಿದೆ ಅಂತ ಕಂಡು ಬಂದಾಗ ಮೊದಲಿಗೆ ಗೋಚರಿಸಿದ್ದು ದಂಡೆಯ ಮೇಲೆ ಬೋರಲಾಗಿ ಮಲಗಿಸಿದ್ದ ಅಕ್ಕಣಿಯ ಶವ. ಅಕ್ಕಣಿ ಆತ್ಮಹತ್ಯೆ ಮಾಡಿಕೊಂಡಳೇ ಅಥವಾ ಕೊಲೆಯೇ ಅಂತ ಯಾರೂ ತಲೆ ಕೆಡಿಸಿಕೊಳ್ಳಲಿಕ್ಕೆ ಹೋಗಲಿಲ್ಲ. ಯಾರದೋ ಮೇಲಿನ ಕೋಪ ಶಮನ ಮಾಡಿಕೊಂಡವಳಂತೆ ಅವಳ ಎರಡೂ ಕೈಗಳು ಮುಷ್ಠಿ ಹಿಡಿದಿದ್ದವು. ನದಿ ದಂಡೆಯ ಇನ್ನೊಂದು ಮೂಲೆಯಲ್ಲಿ ತಿಂಗಳ ಮಗುವಿಗೆ ಬಾಟಲಿ ಹಾಲುಣಿಸುತ್ತಾ ಕುಳಿತ್ತಿದ್ದ ಅಕ್ಕಣಿಯ ತಾಯಿ ರುಕ್ಕಮ್ಮ ಮಗಳ ಮೃತದೇಹವನ್ನು ಕಂಡವಳೇ ಎಲ್ಲವನ್ನೂ ಮರೆತು ಚಂಡಿಯಂತೆ ಓಡುತ್ತಾ ಬಂದಳು. ಮಗಳ ದೇಹದ ಮೇಲೆ ಬಿದ್ದು ಗೋಳೋ ಎಂದು ಅತ್ತಳು. ತನ್ನದು ಮಹಾಪರಾಧವಾಯಿತು ಅಂತ ಮಮ್ಮಲ ಮರುಗಿದಳು. ಕೊನೆಗೂ ನಿನ್ನನ್ನು ಅರ್ಥಮಾಡಿಕೊಳ್ಳಲಾರದೇ ಹೋದೆ ಅಂತ ತನ್ನ ಮಂಕು ಬುದ್ಧಿಗೆ ಇಷ್ಟು ಹಿಡಿ ಶಾಪ ಹಾಕಿಕೊಂಡಳು. ರೇಣುಕಾಂಬೆಗೆ ಕೊನೆಗೂ ಕರುಣೆ ಬರಲಿಲ್ಲ ನನ್ನ ಮಗಳನ್ನು ಒಯ್ದೇ ಬಿಟ್ಟಳು. ಅವಳನ್ನು ನಂಬಿದವರಿಗೆ ಕೊನೆಗೂ ಅವಳು ಕೊಡುವುದಿಷ್ಟೇ ಅಂತ ಹಣೆ ಹಣೆ ಬಡಿದು ಅಳತೊಡಗಿದಳು. ಹೃದಯ ಉಕ್ಕಿ ಬಂತು. ಮಮತೆಯ ಕಟ್ಟೆ ಒಡೆಯಿತು. ಇನ್ನು ಅವಳಿಂದ ಸುಮ್ಮನಿರಲಾಗಲಿಲ್ಲ ಒಡಲಿನಲ್ಲಿ ಬಚ್ಚಿಟ್ಟುಕೊಂಡಿದ್ದ ಗುಟ್ಟೊಂದನ್ನು ಹೊರಗೆಡಹಿದಳು.

'ಮಗಳೇ ನಿನಗೆ ನಾನು ಬಗೆದಂತಹ ದ್ರೋಹ ಯಾವ ತಾಯಿಯೂ ಈ ತನಕ ಮಾಡಿರಲಿಕ್ಕಿಲ್ಲ. ಮುಂದೆಯೂ ಮಾಡಲಾರಳು. ಅದೊಂದು ಬಹಳ ದೊಡ್ಡ ಕತೆ ಮಗಳೇ. ನೀನು ಅಷ್ಟು ಸುಲಭದಲ್ಲಿ ಬೆತ್ತಲೆ ಸೇವೆಗೆ ಒಪ್ಪುವವಳಲ್ಲ ಅಂತ ನಿನ್ನ ವರ್ತನೆಯಿಂದ ನನಗೆ ಮೊದಲೇ ಅರ್ಥವಾಗಿತ್ತು. ಅದಕ್ಕಾಗಿ ಬಲವಾದ ಸಂಚು ಹೂಡಿದ್ದೆ. ನನ್ನ ಕಾಟ ಸಹಿಸಲಿಕ್ಕೆ ಸಾಧ್ಯವಿಲ್ಲ ಅಂತ ನೀನು ಬರೆದ ಪತ್ರ ನಿನ್ನ ಗಂಡನಿಗೆ ತಲುಪಿ ಮರುಪತ್ರ ಬಂದಿತ್ತು. ಅದಕ್ಕೆ ಉತ್ತರವಾಗಿ: ನೀನು ಇಂತಿಂತಹ ದಿನ ಹೊರಟು ಇಂತಿಂತಹ ಹೊತ್ತಿಗೆ ಮುಂಬಯಿ ತಲುಪುವಿ ಅಂತ ನಿನ್ನ ಹೆಸರಿನಲ್ಲಿ ನಿನಗೆ ಗೊತ್ತಿಲ್ಲದಂತೆ ನಾನೇ ನಿನ್ನ ಗಂಡನಿಗೆ ಒಂದು ಪತ್ರ ಬರೆದಿದ್ದೆ. ಅದನ್ನು ನೋಡಿದ ಅವನು ನಿನ್ನನ್ನು ಕರೆದುಕೊಂಡು ಹೋಗಲಿಕ್ಕೆ ಬರಲಿಲ್ಲ. ನನಗೂ ಅದೇ ಬೇಕಾಗಿತ್ತು. ಅವನು ಬರಬಾರದು. ಮುಂಬಯಿಯಲ್ಲೇ ನಿನ್ನ ದಾರಿ ಕಾಯುತ್ತಾ ನಿಂತಿರಬೇಕು. ಇಲ್ಲಿ ನಾನು ಹೊತ್ತುಕೊಂಡ ಹರಕೆಯನ್ನು ಸುಲಭದಲ್ಲಿ ಮಾಡಿ ಪೂರೈಸಬೇಕು ಎಂಬ ಛಲ ನಿನ್ನನ್ನೇ ಬಲಿ ತೆಗೆದುಕೊಳ್ಳುತ್ತದೆಂದು ನಾನು ಕನಸಿನಲ್ಲೂ ಎಣಿಸಿದವಳಲ್ಲ. ನಾನು ಎಣಿಸಿಕೊಂಡದ್ದೆಲ್ಲಾ ತಲೆಕೆಳಗಾಯಿತು. ನಿನ್ನನ್ನೇ ಕಳೆದುಕೊಳ್ಳಬೇಕಾಯಿತು. ಇದು ನನ್ನ ದುರ್ವಿಧಿಯಲ್ಲದೇ ಮತ್ತೇನು? ನನ್ನನ್ನು ಕ್ಷಮಿಸು ಮಗಳೇ....

ಒಂದೇ ಸವನೇ ಅಳುತ್ತಾ ಕುಳಿತಿದ್ದ ರುಕ್ಕಮ್ಮನ ಮುಖ ಒಮ್ಮೆಲೇ ಗಂಭೀರವಾಯಿತು. ಏನೋ ನೆನಪಾದವಳಂತೆ ದಡಬಡನೆ ಎದ್ದವಳು ನದೀ ದಂಡೆಯ ಗುಂಟ ಓಡತೊಡಗಿದಳು. ನದಿ ದಡದ ಒಂದು ಮೂಲೆಯಲ್ಲಿ ಮೊಮ್ಮಗಳನ್ನು ಏಕಾಂಗಿಯಾಗಿ ಬಿಟ್ಟು ಮಗಳ ಶವವನ್ನು ಕಾಣಲು ಓಡೋಡಿ ಬಂದದ್ದು ಇನ್ನೊಂದು ಅಪರಾಧಕ್ಕೆ ಎಡೆ ಮಾಡಿಕೊಟ್ಟಿತ್ತು. ತಿಂಗಳ ಎಳೆಗೂಸು ಓಡಾಡುವವರ ಕಾಲ ತುಳಿತಕ್ಕೆ ಸಿಕ್ಕಿ ನಜ್ಜುಗುಜ್ಜಾಗಿ ರಕ್ತಸಿಕ್ತ ಮಾಂಸಲ ಮುದ್ದೆಯಾಗಿ ಮೂಲೆಗುಂಪಾಗಿತ್ತು. ತನ್ನ ಹೃದಯವನ್ನೇ ಕಿತ್ತು ಹೊರಚೆಲ್ಲಿದವರಂತೆ ರುಕ್ಕಮ್ಮ ದುಃಖದಿಂದ ಕುಸಿದು ಬಿದ್ದಳು. ಯಾರ ಸಮಾಧಾನದ ಮಾತುಗಳೂ ಆಕೆಯ ಕಿವಿ ಸೇರಲಿಲ್ಲ. ಆಕೆಯ ಮೈಮನ ಎರಡೂ ಮರಗಟ್ಟಿ ಹೋಗಿದ್ದವು.

ಕುಶಾಲ ಅಕ್ಕಣಿಗಾಗಿ V.T. Station ನಲ್ಲಿ ಕಾಯುತ್ತಾ ಕುಳಿತಿದ್ದ. ಗಾಡಿ ಮೂರು ಗಂಟೆ ತಡವಾಗಿ ಬರುತ್ತದೆಂದು ಅನೌನ್ಸ್ ಆದಾಗಲೂ ಕುಶಾಲ ಅಲ್ಲಿಂದ ಕದಲಲಿಲ್ಲ. ಕುಳಿತುಕೊಂಡೇ ಇದ್ದ. ಹೆಂಡತಿ ಹಾಗೂ ಮಗಳ ನೆನಪಲ್ಲಿ ಕನಸು ನೇಯುತ್ತಾ ಕುಳಿತಿದ್ದ ಅವನಿಗೆ ನಿಜ ವಿಷಯ ಏನು ಗೊತ್ತು?

ವರಾಹನದಿ ದಂಡೆಯ ಮೇಲೆ ಇಷ್ಟು ಹೊತ್ತು ಇದ್ದ ಸದ್ದು ಗದ್ದಲ ಈಗ ಸಂಪೂರ್ಣ ನಿಂತಿತ್ತು. ಎಲ್ಲಾ ಸಿದ್ಧತೆಯಾಗಿ ಅಕ್ಕಣಿ ಹಾಗೂ ಅಕ್ಕಣಿಯ ಎಳೆಯ ಮಗುವಿನ ಶವ ಮನೆಯತ್ತ ಸಾಗುತ್ತಿತ್ತು. ಬೆತ್ತಲೆ ಸೇವೆಯನ್ನು ಪಟ್ಟು ಬಿಡದೆ ಮಾಡುವುದಾಗಿ ಹಟ ಹಿಡಿದಿದ್ದ ಭಕ್ತಾದಿಗಳಲ್ಲಿ ಕೆಲವರು ಶವದ ಹಿಂದೆ ಮೌನ ಹೆಜ್ಜೆ ಹಾಕತೊಡಗಿದ್ದರು. ಇನ್ನು ಕೆಲವರು ಶವ ಕಣ್ಣಂಚಿನಿಂದ ಕಣ್ಮರೆಯಾಗುವ ತನಕ ನಿಸ್ತೇಜರಾಗಿ ನಿಂತು ನೋಡುತ್ತಿದ್ದರು. ದೂರದ ರೇಣುಕಾಂಬೆಯ ಗುಡಿಯಿಂದ ಬಾರಿಸುವ ಗಂಟೆಯ ನಿನಾದ ಅವರಾರ ಕಿವಿಗೂ ಬಿದ್ದಂತೆ ಕಾಣಲಿಲ್ಲ. ಮನಸ್ಸಿನ ಯಾವುದೋ ಒಂದು ಮೂಲೆಯಲ್ಲಿ ದ್ವಂದ್ವಯುದ್ಧ ನಡೆದು ಒಂದು ರೀತಿಯ ಪರಿವರ್ತನೆಯಾದಂತೆ ಅವರ ಮುಖ ನಿಧಾನವಾಗಿ ಪ್ರಕ್ಷುಬ್ಧಗೊಳ್ಳುತ್ತಿತ್ತು.

# ರಂಗು ರಂಗಾದ ಕಾರ್ಯಕ್ರಮ ಸ್ವರಧಾರಾ




ಬೆಂಗಳೂರಿನ ಶ್ರೀ ವಿಶ್ವೇಶ್ ಭಟ್ ಮತ್ತು ಅವರ ತಂಡ "ಸ್ವರಾಮೃತ" ಮೈಸೂರು ಅಸೋಸಿಯೇಷನ್‌ನ ಎರಡು ದಿನಗಳ ಸಂಗೀತೋತ್ಸವದ ಕಾರ್ಯಕ್ರಮದಡಿಯಲ್ಲಿ ಶನಿವಾರ ದಿನಾಂಕ 10.12.2016 ರಂದು ಒಂದು ವಿಶೇಷ ಕನ್ನಡ ಕರ್ನಾಟಕ ಹಿಂದೂಸ್ಥಾನಿ–ಹಾಲಿವುಡ್–ಬಾಲಿವುಡ್ – ಸ್ಯಾಂಡಲ್ ವುಡ್ ಸೇರಿದಂತೆ ಎಲ್ಲ ಪ್ರಕಾರಗಳ ಸಂಗೀತದ ರಂಗು ರಂಗಾದ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಮೈಸೂರು ಅಸೋಸಿಯೇಷನ್ ಪ್ರತಿವರ್ಷ ಮಕ್ಕಳಲ್ಲಿ ಸಂಗೀತದ ಬಗ್ಗೆ ಆಸಕ್ತಿ ಹಾಗೂ ಶ್ರದ್ಧೆಯನ್ನು ಮೂಡಿಸಲು ಒಂದು ಸಂಗೀತ ಸ್ಪರ್ಧೆಯನ್ನು ಕಳೆದ 10 ವರ್ಷಗಳಿಂದಲೂ ನಡೆಸಿಕೊಂಡು ಬರುತ್ತಿದೆ. ಮೊದಲೆಲ್ಲ ಈ ಸ್ಪರ್ಧೆಯ ವಿಜೇತರಿಗೆ ಗಣೇಶೋತ್ಸವದ ವಿಸರ್ಜನೆಯ ದಿನದ ಕಾರ್ಯಕ್ರಮದಲ್ಲಿ ಬಹುಮಾನವನ್ನು ವಿತರಿಸಲಾಗುತ್ತಿತ್ತು. ಈ ವರ್ಷ ಅದಕ್ಕಾಗಿ ಒಂದು ವಿಶೇಷ ಕಾರ್ಯಕ್ರಮವನ್ನೇ ಆಯೋಜಿಸಬೇಕೆಂದು ನಿರ್ಧರಿಸಿ, ಅಂತೆಯೇ ಬೆಂಗಳೂರಿನ "ಸ್ವರಾಮೃತ" ತಂಡದವರನ್ನು ಆಹ್ವಾನಿಸಲಾಯಿತು.

ಸಂಗೀತದಲ್ಲಿ ಆಸಕ್ತಿ ಇದ್ದ ವೃತ್ತಿಯಲ್ಲಿ ಸಾಫ್ಟ್ ವೇರ್ ಇಂಜಿನಿಯರ್ಸ್ ಕಾಲೇಜ್ ಅಧ್ಯಾಪಕಿ, ಕಾರ್ಪೋರೇಟ್ ಲೆಕ್ಕಿಗ ಹೀಗೆ ವಿವಿಧ ಕ್ಷೇತ್ರದ ವ್ಯಕ್ತಿಗಳಿಂದ ಕೂಡಿದ್ದ 'ಸ್ವರಾಮೃತ' ತಂಡದ ಕಾರ್ಯಕ್ರಮ ಮಕ್ಕಳಿಗೆ ಸ್ಪೂರ್ತಿದಾಯಕವಾಯ್ತು. ಅಂದಿನ ಕಾರ್ಯಕ್ರಮವನ್ನು ಶ್ರೀ ನವಿಲೇಕರ್ ನಿರ್ವಹಿಸಿದರು. ಡಾ. ಬಿ. ಆರ್. ಮಂಜುನಾಥ್ ಶಾಸ್ತ್ರೀಯ ಸಂಗೀತ ಹಾಗೂ ಸುಗಮ ಸಂಗೀತ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಿದರು. ಶ್ರೀ ಶಶಿಕಾಂತ ಜೋಶಿ ವಂದನಾರ್ಪಣೆ ಮಾಡಿದರು.

ಸ್ವರಾಮೃತ ತಂಡ ಅರ್ಪಿಸಿದ ಕಾರ್ಯಕ್ರಮವು 'ರಘುವಂಶ ಸುಧಾಂಬುಧಿ' ಯನ್ನು ಕರ್ನಾಟಕ ಶೈಲಿ, ಹಿಂದೂಸ್ತಾನಿ ಶೈಲಿ ಮತ್ತು ಪಾಶ್ಚಾತ್ಯ ಶೈಲಿಯಲ್ಲಿ ವಾದ್ಯ ನುಡಿಸುವುದರೊಂದಿಗೆ ಆರಂಭವಾಯಿತು.

ಶ್ರೀ ಪವನ್ ಕುಮಾರ್ "ಹುಚ್ಚ ವೆಂಕಟನ ಅಣ್ಣ ಸಚ್ಚ ವೆಂಕಟ"ನ ರೂಪದಲ್ಲಿ ಸಭಿಕರನ್ನು ಬೆಚ್ಚು ಬೀಳಿಸಿದರು. ಕೈಲಾಸಂ ಅವರ 'ನಂ ತಿಪ್ಪಾರಳ್ಳಿ ಬಲು ದೂರ' ಸೊಗಸಾಗಿ ಹಾಡಿ ಜನರನ್ನು ಮೋಡಿ ಮಾಡಿದರು.

ಅಂತೆಯೇ ವಿಶ್ವೇಶ್ ಭಟ್ ಮತ್ತು ಅವರ ಮಗಳು 10 ವರ್ಷದ ಆರಭಿ ಭಟ್ ಕೂಡ "ರಾಯರು ಬಂದರು ಮಾವನ ಮನೆಗೆ' ಮತ್ತು 'ಹೆಂಡತಿಯೊಬ್ಬಳು ಮನೆಯೊಳಗಿದ್ದರೆ' ಒಟ್ಟೊಟ್ಟಿಗೆ ಜುಗಲ್ ಬಂದಿ ರೀತಿ ಹಾಡಿ ಕನ್ನಡದ ಬಗ್ಗೆ ನಮ್ಮ ಪ್ರೇಮವನ್ನು ಜಾಗೃತಗೊಳಿಸಿದರು. ಶುದ್ಧ ಹಿಂದೂಸ್ತಾನಿ ಶಾಸ್ತ್ರೀಯ ಶೈಲಿಯಲ್ಲಿ 'ಭಾಗ್ಯದ ಲಕ್ಷ್ಮಿ ಬಾರಮ್ಮ' ಹಾಡಿದರು. ಪವನ್ ಕುಮಾರ್ ಮತ್ತು ವಿಶ್ವೇಶ್ ಭಟ್ ಸೇರಿ ಅನೇಕ ಕನ್ನಡ ಹಿಂದಿ ಸಿನಿಮಾ ಗೀತೆಗಳ ಸಮ್ಮಿಶ್ರ ಧಾರೆಯನ್ನೇ ಹರಿಸಿದರು.

ಶ್ರೀಮತಿ ಅಶ್ವಿನಿ ಭಟ್ ವೀಣೆಯಲ್ಲಿ, ಶ್ರೀ ಸರ್ವೋತ್ತಮ್ ರಮಣ್ ಕಾಮತ್ ರಿದಂ ಪ್ಯಾಡ್‌ನಲ್ಲಿ, ಶ್ರೀ ಸುಶೃತ್ ಕೀಬೋರ್ಡ್‌ನಲ್ಲಿ ಮತ್ತು ಮುಂಬಯಿನ ಶ್ರೀ ವೈಭವ ತಬಲಾದಲ್ಲಿ ಅತ್ಯಂತ ಸಹಜಸುಂದರವಾಗಿ ಸಹಕರಿಸಿ ಕಾರ್ಯಕ್ರಮಕ್ಕೆ ಮೆರುಗು ನೀಡಿದರು.

ಕನ್ನಡದ ನಾಡಗೀತೆ 'ಭಾರತ ಜನನಿಯ ತನುಜಾತೆ'ಯೊಂದಿಗೆ ಸಮಾಪ್ತವಾದ ಈ ಕಾರ್ಯಕ್ರಮ ಸಭಿಕರ ಮನದಲ್ಲಿ ಅನೇಕ ದಿನಗಳವರೆಗೆ ಅನುರಣಿಸುತ್ತಲೇ ಇರುತ್ತದೆಂಬುದರಲ್ಲಿ ಸಂಶಯವಿಲ್ಲ.





*ಅಸೋಸಿಯೇಶನ್‌ನ ಸದಸ್ಯರಿಂದ ಹೊಸ ವರ್ಷದ ಸಂಭ್ರಮದ ಆಚರಣೆ.*

Date of Publication : 10th of every month RNI No. 040015 / 83
Regd. No. MNE / 93 / 2015-17 Date of Posting:10/11th of every month
at Mumbai Patrika Channel Sorting Office G.P.O.

# ಮೈಸೂರು ಅಸೋಸಿಯೇಷನ್, ಮುಂಬೈ THE MYSORE ASSOCIATION, MUMBAI

ಅರ್ಪಿಸುವ

## ಮೂರು ದಿನಗಳ ಬಹುಭಾಷಾ ನಾಟಕೋತ್ಸವ

## ಶ್ರೀರಂಗ ರಂಗೋತ್ಸವ

**ದಿನಾಂಕ 20.01.2017**

ಶುಕ್ರವಾರ ಸಂಜೆ
7.00ಕ್ಕೆ : 'ಖರ್ ಖರ್' (ಹಿಂದಿ ನಾಟಕ)
ಅಮಿಗೋ, ಮುಂಬಯಿ ತಂಡದವರಿಂದ
ರಚನೆ : ಅಮಾತ್ಯಾ ಗೊರಾಡಿಯಾ / ಪ್ರೀತೇಶ್,
ನಿರ್ದೇಶನ : ಅಮಾತ್ಯಾ ಗೊರಾಡಿಯಾ

**ದಿನಾಂಕ 21.01.2017**

ಶನಿವಾರ ಸಂಜೆ 7.00ಕ್ಕೆ: 'ಐ.ಡಿ.' (ಮರಾಠಿ ನಾಟಕ)
ಅಭಿನವ, ಕಲ್ಯಾಣ್ ತಂಡದವರಿಂದ
ರಚನೆ : ಪ್ರಣವ್ ಸಖದೇವ್
ನಿರ್ದೇಶನ : ಅಭಿಜಿತ್

**ದಿನಾಂಕ 22.01.2017**

ರವಿವಾರ ಸಂಜೆ 6.30ಕ್ಕೆ: **'ಕಂಚುಕಿ'** (ಕನ್ನಡ ನಾಟಕ)
ನಟರಂಗ ಬೆಂಗಳೂರು,
ತಂಡದವರಿಂದ
ರಚನೆ : ಚಂದ್ರಶೇಖರ ಕಂಬಾರ
ನಿರ್ದೇಶನ : ದಿವ್ಯಾ ಕಾರಂತ

**ಎಲ್ಲರಿಗೂ ಆತ್ಮೀಯ ಸ್ವಾಗತ.**

ಪ್ರಾಯೋಜಕರು :
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಕರ್ನಾಟಕ ಸರಕಾರ.
ಮತ್ತು
ಶ್ರೀಮತಿ ಉಷಾ ದೇಸಾಯಿ, ನಿರ್ದೇಶಕರು ಆದ್ಯ ರಂಗಾಚಾರ್ಯ ಫೌಂಡೇಶನ್

*presents*

## Three Days Multilingual Theatre Festival

## SHRIRANGA RANGOTSAV

**Date 20.01.2017**

Friday 7.00pm : 'Kharr Kharr' (Hindi Play)
Amygo Productions, Mumbai
Written by Amatya Goradia/Pritesh
Directed by Amatya Goradia

**Date 21.01.2017**

Saturday 7.00 pm : 'I.D.' (Marathi Play)
Abhinav Kalyan Productions
Written by Pranav Sakhdev &
Directed by Abhijeet.

**Date 22.01.2017**

Sunday: 'Kanchuki'
6.30pm:(Kannada Play)
Nataranga Productions , Bengaluru
Written by Chandrashekhar Kambar
Directed by Divya Karanth

***All are cordially invited***

Sponsor :
Department of Kannada & Culture, Bengaluru
Govt. of Karnataka &
Smt. Usha Desai, Director Aadya Rangacharya Foundation

**Venue :**
**Mysore Association Auditorium, 393, Bhau Daji Road, Matunga (E), Mumbai – 400 019.**
**Ph : 022 2402 4647/2403 7065.**

## ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಮತ್ತು ಮೈಸೂರು ಅಸೋಸಿಯೇಷನ್ ಮುಂಬಯಿ

ಇವರ ಸಂಯುಕ್ತ ಆಶ್ರಯದಲ್ಲಿ

## ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ -2017

| | | |
|---|---|---|
| ದಿನಾಂಕ ಮತ್ತು ವೇಳೆ | : | ಶನಿವಾರ **28.01.2017** ಸಂಜೆ **05.00**ರಿಂದ |
| ಉಪನ್ಯಾಸಕರು | : | ಜಸ್ಟೀಸ್ ಬಿ.ಎನ್. ಶ್ರೀಕೃಷ್ಣ (ನಿವೃತ್ತ ನ್ಯಾಯಾಧೀಶರು, ಸುಪ್ರೀಂ ಕೋರ್ಟ್) |
| ವಿಷಯ | : | ಗಾಂಧೀಜಿಯವರ ವಿಚಾರ ಧಾರೆಗಳ ಪ್ರಸ್ತುತತೆ |
| ದಿನಾಂಕ ಮತ್ತು ವೇಳೆ | : | ರವಿವಾರ **29.01.2017** ಬೆಳಿಗ್ಗೆ **11.30**ರಿಂದ ಮಧ್ಯಾಹ್ನ **1.00**ರ ವರೆಗೆ |
| ವಿಷಯ | : | ಉಪನಿಷತ್ತುಗಳಲ್ಲಿ ಮಾನವೀಯತೆ |

ಸ್ಥಳ : ಮೈಸೂರು ಅಸೋಸಿಯೇಷನ್ ಸಭಾಗೃಹ,393 ಭಾವು ದಾಜಿ ರಸ್ತೆ, ಮಾತುಂಗ, ಮುಂಬಯಿ

*ತಮಗೆಲ್ಲರಿಗೂ ಹಾರ್ದಿಕ ಸ್ವಾಗತ*

ಡಾ| ಜಿ. ಎನ್. ಉಪಾಧ್ಯ
ಮುಖ್ಯಸ್ಥರು, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ
ವಿದ್ಯಾನಗರಿ, ಮುಂಬಯಿ-400 098

ಡಾ| ಜಿ. ಎಸ್. ಶಂಕರಲಿಂಗ
ಗೌ. ಕಾರ್ಯದರ್ಶಿ, ಮೈಸೂರು ಅಸೋಸಿಯೇಷನ್, ಮುಂಬಯಿ
ಮಾಟುಂಗ, ಮುಂಬಯಿ-400 019

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361